MAG(2) PRB/CR/70/2022-23 REG NO: KARKAN27951



# ಮುಂಜಾನೆ ವಾರ್ತೆ

ಇ-ಪೇಪರ್: www.munjaneevartheepaper.com
EDITOR: H.L.AMARANATH
MUNJANE VARTHE
ಸಂಪಾದಕ: ಹೆಚ್.ಎಲ್ ಅಮರನಾಥ್
ಕನ್ನಡ ದಿನಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ
9663122276
website: munjanevarthe.com

Volume: 02 Issue: 96 | ಸಂಪುಟ: 02 | ಸಂಚಿಕೆ: 96 | ಪುಟಗಳು: 04 | munjanevarthe | 18 SATURDAY MAY 2024 | 18 ಶನಿವಾರ ಮೇ 2024 | ₹ 2

ಪರ್ಲ್ ಅಕಾಡೆಮಿಯಲ್ಲಿ 'ಪೋರ್ಟ್ ಪೋಲಿಯೊ 2024' ವಿವರಪುಟ 02

ಸೈಬರ್‌ಕ್ರೈಮ್ ಸವಾಲು ಎದುರಿಸಲು 'ಕಾಪ್ ಕನೆಕ್ಟ್ ಕೆಫೆ' ಉದ್ಘಾಟನೆ ವಿವರಪುಟ 03

ಶ್ರೀ ದಕ್ಷಿಣೇಶ್ವರ ಸ್ವಾಮಿ ನೂತನ ದೇವಸ್ಥಾನದ ಪ್ರತಿಷ್ಠಾಪನ ಮಹೋತ್ಸವ ವಿವರಪುಟ 04

ಸಂಚಾರಿ ಪೊಲೀಸರು ಕಳುಹಿಸಿದ ನೋಟಿಸ್ ತಲುಪಿದ 7 ದಿನದಲ್ಲಿ ಸಂಬಂಧಪಟ್ಟ ಸಂಚಾರಿ ಠಾಣೆಗೆ ಹೋಗಿ ದಂಡ ಪಾವತಿಸಬೇಕು. ಇಲ್ಲದಿದ್ದರೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ದಂಡ ಕಟ್ಟದೇ ಮೊಂಡಾಟ ಮಾಡಿದರೆ 6 ತಿಂಗಳು ಜೈಲು ಅಥವಾ 5,000 ರೂ. ದಂಡ ವಿಧಿಸುವ ಎಚ್ಚರಿಕೆಯನ್ನು ನೋಟಿಸ್‌ನಲ್ಲಿ ನೀಡಲಾಗಿದೆ. ಎಕ್ಸ್‌ಪ್ರೆಸ್‌ವೇಯಲ್ಲಿ ವೇಗ ನಿಯಂತ್ರಣಕ್ಕೆ ಪೊಲೀಸರು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೊರೆ ಹೋಗಿದ್ದು ಎಐ ಕ್ಯಾಮೆರಾ ಅಳವಡಿಕೆ ಮಾಡಿದ್ದಾರೆ.

# 12 ಸಾವಿರಕ್ಕೂ ಹೆಚ್ಚು ಕೇಸ್ ದಾಖಲು

ಬೆಂಗಳೂರು: ಎಕ್ಸ್‌ಪ್ರೆಸ್‌ವೇಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಚಾಲಕರೇ ಎಚ್ಚರವಾಗಿರಿ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವಾಹನ ಚಾಲನೆ ಮಾಡಿಕೊಂಡು ಹೋಗುವಾಗ ಮೈಮರೆತು ಸಂಚಾರ ನಿಯಮ ಉಲ್ಲಂಘನೆಮಾಡಿಕೊಂಡು ಹೋಗಿರುವ ವಾಹನ ಮಾಲೀಕರ ಮೇಲೆ ಬರೋಬ್ಬರಿ 12 ಸಾವಿರಕ್ಕೂ ಅಧಿಕ ಕೇಸ್ ದಾಖಲಾಗಿದೆ.

ಮೇ 1 ರಿಂದ ಮೇ 16 ವರೆಗೆ ಒಟ್ಟು 12,192 ಕೇಸ್‌ಗಳು ದಾಖಲಾಗಿದೆ. ಹೆದ್ದಾರಿಯಲ್ಲಿ ಅಳವಡಿಸಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕ್ಯಾಮೆರಾ



ಕಣ್ಣಿನಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳ ಆಧಾರದ ಮೇಲೆ ಕೇಸ್ ಮಾಡಲಾಗಿದೆ.

ಅತಿಯಾದ ವೇಗ, ಚಾಲಕರು ಚಾಲಕ ಸೀಟ್ ಬೆಲ್ಟ್ ಧರಿಸದೇ ಇರುವುದು ಹಾಗೂ ಪಕ್ಕದಲ್ಲಿ ಕುಳಿತುಕೊಂಡಿರೋ ವ್ಯಕ್ತಿ ಸೀಟ್ ಬೆಲ್ಟ್ ಧರಿಸದೇ ಇರುವುದು ಈ ಎಲ್ಲಾ ಸಂಚಾರಿ ನಿಯಮ ಉಲ್ಲಂಘನೆ ಮೇಲೆ ಪೊಲೀಸರು ಸಂಬಂಧಪಟ್ಟ ಮಾಲೀಕನ ವಿಳಾಸಕ್ಕೆ ನೋಟಿಸ್ ಕಳುಹಿಸಿದ್ದಾರೆ.

ಸಂಚಾರಿ ಪೊಲೀಸರು ಕಳುಹಿಸಿದ ನೋಟಿಸ್ ತಲುಪಿದ 7 ದಿನದಲ್ಲಿ ಸಂಬಂಧಪಟ್ಟ ಸಂಚಾರಿ ಠಾಣೆಗೆ ಹೋಗಿ ದಂಡ ಪಾವತಿಸಬೇಕು. ಇಲ್ಲದಿದ್ದರೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ದಂಡ ಕಟ್ಟದೇ ಮೊಂಡಾಟ ಮಾಡಿದರೆ 6 ತಿಂಗಳು ಜೈಲು ಅಥವಾ 5,000 ರೂ. ದಂಡ ವಿಧಿಸುವ ಎಚ್ಚರಿಕೆಯನ್ನು ನೋಟಿಸ್‌ನಲ್ಲಿ ನೀಡಲಾಗಿದೆ.

ಎಕ್ಸ್‌ಪ್ರೆಸ್‌ವೇಯಲ್ಲಿ ವೇಗ ನಿಯಂತ್ರಣಕ್ಕೆ ಪೊಲೀಸರು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮೊರೆ ಹೋಗಿದ್ದು ಎಐ ಕ್ಯಾಮೆರಾ ಅಳವಡಿಕೆ ಮಾಡಿದ್ದಾರೆ.

ರಾಜ್ಯ ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್ ಕುಮಾರ್ ಆದೇಶದ ಮೇರೆಗೆ ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವ ಕ್ಯಾಮೆರಾವನ್ನು ಅಳವಡಿಕೆ ಮಾಡಲಾಗಿದೆ. ವಾಹನದ ನಂಬರ್‌ನಿಂದ ಆರ್‌ಟಿಒ ಸಂಪರ್ಕ ಪಡೆದು ಮೊಬೈಲಿಗೆ ದಂಡ ಪಾವತಿಸುವಂತೆ ನೋಟಿಸ್ ಬರುತ್ತದೆ.

ಎಕ್ಸ್‌ಪ್ರೆಸ್‌ವೇನಲ್ಲಿ ಗರಿಷ್ಠ ವೇಗದ ಮಿತಿಯನ್ನು ಗಂಟೆಗೆ 100 ಕಿ.ಮೀ ನಿಗದಿ ಪಡಿಸಲಾಗಿದೆ. ಅಷ್ಟೇ ಅಲ್ಲದೇ ರೆಡಾರ್ ಗನ್ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ.

ವೇಗ ಮಿತಿ ದಾಟಿದರೆ 1000 ರೂ. ದಂಡ ಹಾಗೂ ಡಿಎಲ್ ರದ್ದುಪಡಿಸುವ ಕಠಿಣ ಕ್ರಮಕ್ಕೆ ಪೊಲೀಸರು ಮುಂದಾಗಿದ್ದಾರೆ. ನಿಯಮ ಉಲ್ಲಂಘನೆಯ ಫೋಟೋ ಹಾಗೂ ನೋಟಿಸ್ ನೀಡಿ ದಂಡ ವಸೂಲಿ ಮಾಡಲಾಗುತ್ತಿದೆ.

## ಒಂದು ವಾರ ಭಾರೀ ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ಒಂದು ವಾರ ಮುಂಗಾರು ಮಳೆ ಚುರುಕುಗೊಳ್ಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಕೊಡಗು, ಮೈಸೂರು, ಹಾಸನ, ಮಂಡ್ಯ, ತುಮಕೂರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಿದ್ದು, ಈ ಜಿಲ್ಲೆಗಳ ಜತೆಗೆ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಪ್ರತಿ ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ ಗಾಳಿ ಸಮೇತ ಭಾರೀ ಮಳೆ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಇಂದು ಮತ್ತು ನಾಳೆ ಮಳೆ ತೀವ್ರತೆ ಹೆಚ್ಚಾಗಲಿದ್ದು, ಇದೇ 20ರ ವರೆಗೆ ಕೆಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರೀ ಮಳೆ ಬೀಳುವ ಸಾಧ್ಯತೆ ಇದೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನಗಳ ಕಾಲ ಮೋಡಕವಿದ ವಾತಾವರಣವಿರಲಿದ್ದು, ಸಂಜೆ ಅಥವಾ ರಾತ್ರಿವೇಳೆ ಹಗುರದಿಂದ ಭಾರೀ ಮಳೆಯಾಗುವ ನಿರೀಕ್ಷೆ ಇದೆ. ನಿನ್ನೆ ರಾತ್ರಿ ಶಿವಮೊಗ್ಗ, ದಾವಣಗೆರೆ, ಹಾಸನ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಿದ್ದು, ಕೊಪ್ಪಳ, ಹಾವೇರಿ ಜಿಲ್ಲೆಯಲ್ಲಿಯೂ ಗುಡುಗು ಸಹಿತ ಮಳೆಯಾಗಿದೆ. ಹಾವೇರಿ ಜಿಲ್ಲೆಯಲ್ಲಿ ಸಿಡಿಲು ಬಡಿದು, ಓರ್ವ ಯುವಕ ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ.

ಶಿವಮೊಗ್ಗ, ದಾವಣಗೆರೆ, ಹಾಸನ, ಕೊಡಗು ಜಿಲ್ಲೆಗಳಲ್ಲಿ ವರ್ಷಧಾರೆ ಉತ್ತಮವಾಗಿದ್ದು, ರೈತರಲ್ಲಿ ಸಂತಸ ಉಂಟುಮಾಡಿದೆ. ಮಳೆ ಬೀಳುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಚುರುಕು ಗೊಂಡಿರುವ ಬಗ್ಗೆ ನಮ್ಮ ಪ್ರತಿನಿಧಿಗಳು ವರದಿ ಮಾಡಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆ ಪರಿಹಾರವನ್ನು ಸರ್ಕಾರ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ. ರೈತರು ತಮ್ಮ ಬ್ಯಾಂಕ್‌ಗಳಿಗೆ ಭೇಟಿ ನೀಡಿ, ಹಣ ಪಾವತಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ರಘುನಂದನಮೂರ್ತಿ ತಿಳಿಸಿದ್ದಾರೆ.

ಇದರ ಜತೆಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ರೈತರ ಖಾತೆಗಳಿಗೆ ತಲಾ ಎರಡು ಸಾವಿರ ರೂಪಾಯಿ ವರೆಗೆ ರಾಜ್ಯ ಸರ್ಕಾರದ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಹಾವೇರಿ ಜಿಲ್ಲಿಯಲ್ಲಿ ಒಂದು ಲಕ್ಷ 98 ಸಾವಿರದ 455 ರೈತರಿಗೆ 9 ಹಂತದಲ್ಲಿ 37 ಕೋಟಿ 73 ಲಕ್ಷ ರೂಪಾಯಿ ಪರಿಹಾರದ ಮೊತ್ತವನ್ನು ಜಮೆ ಮಾಡಲಾಗಿದೆ ಎಂದು ಅವರು ಮಾಧ್ಯಮಗಳಿಗೆ ಮಾಹಿತಿ ನೀಡಿದರು.



ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ಬಂಡೀಪುರ ಇದೀಗ ಗುಲ್‌ಮೊಹರ್ ತನ್ನ ಸೌಂದರ್ಯದ ಮೊಹರನ್ನೊತ್ತಿದೆ. ಮರದ ತುಂಬೆಲ್ಲ ಕೆಂಪು ಹೂಗಳನ್ನರಳಿಸಿಕೊಂಡು ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ.

## ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ: ಡಿಕೆಶಿ

ಬೆಂಗಳೂರು: "ದೇಶದೆಲ್ಲೆಡೆ ಕಾಂಗ್ರೆಸ್ ಪಕ್ಷ ಹಾಗೂ ಇಂಡಿಯಾ ಮೈತ್ರಿಕೂಟದ ಪರವಾಗಿ ವಿಶ್ವಾಸ ಮೂಡುತ್ತಿದೆ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶುಕ್ರವಾರ ಪ್ರತಿಕ್ರಿಯಿಸಿದರು. ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರದ ಬಗ್ಗೆ ಮಾಧ್ಯಮಗಳು ಕೇಳಿದಾಗ ಅವರು ಹೇಳಿದ್ದಿಷ್ಟು;

"ಉತ್ತರ ಪ್ರದೇಶದಲ್ಲಿ 40ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಇಂಡಿಯಾ ಮೈತ್ರಿಕೂಟ ಗೆಲ್ಲಲಿದೆ ಎಂಬ ವಿಶ್ವಾಸವಿದೆ.

ನಮ್ಮ ರಾಜ್ಯದಲ್ಲಿ ಹೇಗೆ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆ ಜಾರಿ ಮಾಡಿದ್ದೇವೋ ಅದೇ ರೀತಿ ಇಂಡಿಯಾ ಒಕ್ಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಗ್ಯಾರಂಟಿ ಯೋಜನೆ ಜಾರಿ ಮಾಡಲಿದೆ ಎಂದು ಜನರಿಗೆ ವಿವರಿಸಿದ್ದೇವೆ.

## ಸರ್ಕಾರದ ಖಜಾನೆ ಖಾಲಿ ಖಾಲಿ

ಬೆಂಗಳೂರು: ಅನ್ನದಾತರ ಹೊಟ್ಟೆಗೆ ಹೊಡೆದಿರುವ ಕಾಂಗ್ರೆಸ್ ಸರ್ಕಾರ ಪಿಂಚಣಿ, ನರೇಗಾ ಹಣ ಸಾಲ ಮರುಪಾವತಿಗೆ ಹೊಂದಿಸದಂತೆ
ಸರ್ಕಾರ ಆದೇಶ ನೀಡಲಿ ಎಂದಿರುವ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಬ್ಯಾಂಕುಗಳು ಒಪ್ಪದಿದ್ದರೆ ಸಾಲ ಮನ್ನಾ ಮಾಡಿ, ರೈತರಿಗೆ ವಿಶೇಷ ಸಹಾಯಧನ ನೀಡಿ ಎಂದು ಸಲಹೆ ನೀಡಿದ್ದು ಪಂಚ ಗ್ಯಾರಂಟಿಗಳನ್ನು ನೀಡುವ ಮೂಲಕ ಖಜಾನೆ ಖಾಲಿ ಮಾಡಿದ್ದಾರೆ. ಇದೀಗ ಖಜಾನೆಯಲ್ಲಿ ಉಳಿದ ಚಿಲ್ಲರೆ ಕಾಸನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಎಣಿಸುತ್ತಿದ್ದಾರೆ ಎಂದು ಲೇವಡಿ ಮಾಡಿದ್ದಾರೆ. ಕಾಂಗ್ರೆಸ್ ನರೇಗಾ ಹಣ, ಪಿಂಚಣಿ ಹಣವನ್ನೂ ರೈತರ ಸಾಲಕ್ಕೆ ಜಮೆ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡಲೇ ರೈತರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳದಂತೆ ಬ್ಯಾಂಕ್‌ಗಳಿಗೆ ಸೂಚಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಬೇಕು. ಬ್ಯಾಂಕ್ ಗಳು ಒಪ್ಪದಿದ್ದರೆ ರೈತರ ಸಾಲ ಮನ್ನಾ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕರ್ನಾಟಕದ ರೈತರಿಗಾಗಿ 3,454 ಕೋಟಿ ರೂ. ಬರ ಪರಿಹಾರ ಬಿಡುಗಡೆಗೊಳಿಸಿದೆ. ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ತನ್ನ ಪಾಲಿನ ಹಣವನ್ನು ನೀಡಿಲ್ಲ. ಕೇಂದ್ರ ಸರ್ಕಾರ ನೀಡಿದ ಹಣವನ್ನು ಕೂಡ ರೈತರಿಗೆ ಸರಿಯಾಗಿ ತಲುಪಿಸಿಲ್ಲ. ಈ ಪರಿಹಾರದ ಹಣವನ್ನು ಹಳೆ ಬಾಕಿಗಳಿಗೆ ಬ್ಯಾಂಕುಗಳು ಜಮೆ ಮಾಡುತ್ತಿದ್ದರೂ ರಾಜ್ಯ ಸರ್ಕಾರ ತಕ್ಷಣದ ಕ್ರಮ ವಹಿಸದೆ ಕೈ ಕಟ್ಟಿ ಕುಳಿತಿತ್ತು. ಈ ಮೂಲಕ ಅನ್ನದಾತರ ಹೊಟ್ಟೆಗೆ ಹೊಡೆಯುವ ಪಾಪದ ಕೆಲಸ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಎಸ್‌ಎಸ್‌ಎಲ್‌ಸಿಯಲ್ಲಿ ಗ್ರೇಸ್ ಮಾರ್ಕ್ಸ್ ಇಲ್ಲ..!

ಪರೀಕ್ಷೆಯಲ್ಲಿ ಈ ಬಾರಿ ಕಠಿಣ ಕ್ರಮ ಕೈಗೊಳ್ಳಲಾಗಿತ್ತು. ಅದು ಸರಿ ಇದೆ. ಆದರೆ, ಈ ಬಾರಿ ಶೇ 20 ರಷ್ಟು ಕೃಪಾಂಕ ಕೊಟ್ಟಿದ್ದು ಸರಿ ಇತ್ತಾ? ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪ್ರಶ್ನಿಸಿದರು. ಕಾಪಿ ಹೊಡೆಯುವುದನ್ನು ತಪ್ಪಿಸಲು ಈ ಬಾರಿ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಹಾಗಂತ ಅವರಿಗೆ ಗ್ರೇಸ್ ಮಾರ್ಕ್ಸ್ ಕೊಟ್ಟಿರುವುದು ಸರಿಯಲ್ಲ. ಕಾಪಿ ಮಾಡುವುದನ್ನು ತಡೆದು ಅದನ್ನು ಗ್ರೇಸ್ ಮಾರ್ಕ್ಸ್ ಮೂಲಕ ನೀಡದಂತಾಗಿದೆ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮುಂದಿನ ಬಾರಿ ಮರುಪರಿಶೀಲಿಸುವಂತೆ ಸಿಎಂ ಸೂಚಿಸಿದರು.

ಬೆಂಗಳೂರು: ಮುಂದಿನ ವರ್ಷದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗ್ರೇಸ್ ಮಾರ್ಕ್ಸ್ ನೀಡದಂತೆ ಸಿಎಂ ಸಿದ್ದರಾಮಯ್ಯ ಅವರು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಶಿಕ್ಷಣ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಸಲ ಗ್ರೇಸ್ ಮಾರ್ಕ್ಸ್ ಹೆಚ್ಚಿಸಿದ ವಿಚಾರವಾಗಿ ಆಕ್ಷೇಪ ವ್ಯಕ್ತಪಡಿಸಿದರು. ಅಷ್ಟೊಂದು ಹೆಚ್ಚಿನ ಗ್ರೇಸ್ ಮಾರ್ಕ್ ನೀಡುವ ಅಗತ್ಯ ಇತ್ತಾ? ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹಾಗೂ ಶಿಕ್ಷಣ ಅಧಿಕಾರಿಗಳ ಬಳಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ಗ್ರೇಸ್ ಮಾರ್ಕ್ಸ್ ಹೆಚ್ಚಳಕ್ಕೆ ಶಿಕ್ಷಣ ತಜ್ಞರು ಸೇರಿ ಹಲವರಿಂದ ವಿರೋಧದ ಬಗ್ಗೆ ಚರ್ಚೆ ನಡೆಯಿತು. ಶಿಕ್ಷಣ ಇಲಾಖೆಯಿಂದಲೂ ಗ್ರೇಸ್ ಮಾರ್ಕ್ಸ್‌ಗೆ ಸಾಕಷ್ಟು ವಿರೋಧ ಬರ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಈ ವೇಳೆ ಸಿಎಂ ಮಧ್ಯಪ್ರವೇಶ ಮಾಡಿ, ಗ್ರೇಸ್ ಮಾರ್ಕ್ಸ್ ಕೊಡುವುದು ಅವೈಜ್ಞಾನಿಕ ಎಂಬ ಬಗ್ಗೆ ಅಭಿಪ್ರಾಯಗಳು ಬರುತ್ತಿವೆ. ಎಸ್‌ಎಸ್‌ಎಲ್‌ಸಿಯಲ್ಲಿ ಗ್ರೇಸ್ ಮಾರ್ಕ್ಸ್



ಕೊಡೋದು ಅಗತ್ಯ ಇತ್ತಾ? ಎಂದು ಪ್ರಶ್ನೆ ಮಾಡಿದ ಸಿಎಂ ಸಿದ್ದರಾಮಯ್ಯ, ಮುಂದಿನ ಶೈಕ್ಷಣಿಕ ವರ್ಷದಿಂದ ಗ್ರೇಸ್ ಮಾರ್ಕ್ಸ್ ಕೊಡುವ ಬಗ್ಗೆ ಮರುಪರಿಶೀಲನೆ ಮಾಡುವಂತೆ ಸೂಚಿಸಿದರು. ಮುಂದಿನ ವರ್ಷದಿಂದ ಗ್ರೇಸ್ ಮಾರ್ಕ್ಸ್ ಕೊಡಬೇಡಿ: ಪರೀಕ್ಷೆಯಲ್ಲಿ ಈ ಬಾರಿ ಕಠಿಣ ಕ್ರಮ ಕೈಗೊಳ್ಳಲಾಗಿತ್ತು. ಅದು ಸರಿ ಇದೆ. ಆದರೆ, ಈ ಬಾರಿ ಶೇ 20 ರಷ್ಟು ಕೃಪಾಂಕ ಕೊಟ್ಟಿದ್ದು ಸರಿ ಇತ್ತಾ? ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪ್ರಶ್ನಿಸಿದರು. ಕಾಪಿ ಹೊಡೆಯುವುದನ್ನು ತಪ್ಪಿಸಲು ಈ ಬಾರಿ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಹಾಗಂತ ಅವರಿಗೆ ಗ್ರೇಸ್ ಮಾರ್ಕ್ಸ್ ಕೊಟ್ಟಿರುವುದು ಸರಿಯಲ್ಲ. ಕಾಪಿ ಮಾಡುವುದನ್ನು ತಡೆದು ಅದನ್ನು ಗ್ರೇಸ್ ಮಾರ್ಕ್ಸ್ ಮೂಲಕ ನೀಡದಂತಾಗಿದೆ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮುಂದಿನ ಬಾರಿ ಮರುಪರಿಶೀಲಿಸುವಂತೆ ಸಿಎಂ ಸೂಚಿಸಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತ ಏಕೆ ಆಯಿತು ಅಂತ ಸಭೆಯಲ್ಲಿ ಅಧಿಕಾರಿಗಳಿಗೆ ಸಿಎಂ ಕೇಳಿದರು. ಉತ್ತಮ ಫಲಿತಾಂಶ ಬರುವ ನಿಟ್ಟಿನಲ್ಲಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಎಂದು ಇದೇ ವೇಳೆ ಸಿಎಂ ಸೂಚಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ 20% ಗ್ರೇಸ್ ಮಾರ್ಕ್ಸ್ ವಿಚಾರವಾಗಿ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ಈ ವರ್ಷ ಮಾತ್ರ ಗ್ರೇಸ್ ಮಾರ್ಕ್ಸ್ ಕೊಡುವ ತೀರ್ಮಾನ ಮಾಡಲಾಗಿತ್ತು. ಮುಂದಿನ ವರ್ಷದಿಂದ ಗ್ರೇಸ್ ಮಾರ್ಕ್ಸ್ ಇರಲ್ಲ.

ಪರೀಕ್ಷಾ ನಡವಳಿಕೆ ಸರಿ ಮಾಡಲು ಮುಂದಾಗಿದ್ದೆವು. ಸಿಎಂ ಇದರ ಬಗ್ಗೆ ಸಭೆಯಲ್ಲಿ ಮಾಹಿತಿ ಕೇಳಿದ್ರು. ಯಾವಾಗಲೂ ಶೇ5ರಷ್ಟು ಇತ್ತು. ಕೋವಿಡ್ ವೇಳೆ ಶೇ10ರಷ್ಟು ಮಾಡಲಾಗಿತ್ತು. ಕಾನ್ಫಿಡೆಂಟ್ ಕೊಟ್ಟು ಪಾಸ್ ಮಾಡಲು ನಿರ್ಧರಿಸಲಾಗಿತ್ತು. ಹಾಗಾಗಿ 20% ಗ್ರೇಸ್ ಮಾರ್ಕ್ಸ್ ನೀಡಲಾಗಿತ್ತು ಎಂದರು.

ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ
ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...
www.munjaneevartheepaper.com

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjaneevartheepaper.com
18 SATURDAY MAY 2024
18 ಶನಿವಾರ ಮೇ 2024

# ಮನಸ್ಸಿನಿಂದ ಖಾದಿ ಖಾಕಿ ಖಾವಿ ಕಾಯಕ ಮಾಡಿದರೆ ಜನಕಲ್ಯಾಣ ಸಾಧ್ಯ




ಕಲಬುರ್ಗಿ : ಭಾವೈಕ್ಯತೆ ಮತ್ತು ಆಧ್ಯಾತ್ಮ ಜ್ಞಾನ ಭಾರತದ ಉಸಿರು. ಭಾರತೀಯ ಸಂಸ್ಕೃತಿ ಎಲ್ಲರನ್ನು ಒಗ್ಗೂಡಿಸುವುದೇ ಆಗಿದೆ ಹೊರತು ವಿಘಟಿಸುವುದಲ್ಲ. ಶುದ್ಧ ಮನಸ್ಸಿನಿಂದ ಖಾದಿ ಖಾಕಿ ಖಾವಿ ಕಾಯಕ ಮಾಡಿದರೆ ಜನಕಲ್ಯಾಣದ ಜೊತೆಗೆ ಲೋಕ ಕಲ್ಯಾಣವಾಗುವುದರಲ್ಲಿ ಯಾವುದೇ ಸಂದೇಹವಿಲ್ಲವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲೂಕಿನ ಶ್ರೀನಿವಾಸ ಸರಡಗಿ ಚಿನ್ನದಕಂತಿ ಚಿಕ್ಕವೀರೇಶ್ವರ ಸಂಸ್ಥಾನ ಹಿರೇಮಠದ ಡಾ.ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳವರ ಷಷ್ಠಿಪೂರ್ತಿ ಅಂಗವಾಗಿ ಜರುಗಿದ ಭಕ್ತ ಹಿತ ಚಿಂತನ ಸಮಾವೇಶದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸ್ವಾರ್ಥರಹಿತ ಬದುಕಿಗೆ ಬೆಲೆಯಿದೆ ಮತ್ತು ಬಲವಿದೆ. ಹಿರಿಯರ ಮೌಲ್ಯಾಧಾರಿತ ಚಿಂತನಗಳು ಬಾಳಿನ ಆಶಾಕಿರಣವಾಗಿವೆ. ಧರ್ಮ ಮತ್ತು ಧರ್ಮಾಚರಣೆ ಮರೆತರೆ ಅಪಾಯ ತಪ್ಪಿದ್ದಲ್ಲ. ಶಸ್ತ್ರ ಪ್ರಭುತ್ವ ಮತ್ತು ಅರ್ಥಗಳು ಅಜ್ಞಾನಿಯ ಕೈಯಲ್ಲಿದ್ದರೆ ಸರ್ವನಾಶ. ಅದೇ ಸಜ್ಜನರ ಕೈಯಲ್ಲಿದ್ದರೆ ಜನಹಿತಾತ್ಮಕ ಕಾರ್ಯಗಳು ನಡೆಯುತ್ತವೆ. ಸಮಾಜದ ಓರೆಕೋರೆಗಳನ್ನು ತಿದ್ದಿ ತೀಡಿ ಮುನ್ನಡೆಸುವುದೇ ಗುರುವಿನ ಧರ್ಮವಾಗಿದೆ. ಪ್ರಾಪಂಚಿಕ ಸಂಬಂಧಗಳು ಕೆಲವು ಸಂದರ್ಭಗಳಲ್ಲಿ ಕೆಡಬಹುದು. ಆದರೆ ಗುರು ಶಿಷ್ಯರ ಸಂಬಂಧ ಚಿರಂತನ ಮತ್ತು ನಿತ್ಯ ನೂತನ. ಶ್ರೀ ಜಗದ್ಗುರು ರೇಣುಕಾಚಾರ್ಯರು ಜೀವನ ವಿಕಾಸಗೊಳ್ಳಲು ಧರ್ಮದ ದಶ ಸೂತ್ರಗಳನ್ನು ಬೋಧಿಸಿದ್ದಾರೆ. ಅವರ ವಿಚಾರ ಧಾರೆಗಳು ಜೀವನ ವಿಕಾಸಕ್ಕೆ ಭದ್ರ ಅಡಿಪಾಯವಾಗಿವೆ. ಡಾ.ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಎಲ್ಲೆಡೆ ಸಂಚರಿಸಿ ವೀರಶೈವ ಧರ್ಮ ಸಂಸ್ಕೃತಿಯನ್ನು ಪಸರಿಸುವ ಮೂಲಕ ಜನ ಸಮುದಾಯವನ್ನು ಜಾಗೃತಗೊಳಿಸುತ್ತಿರುವುದು ಸಂತೋಷದ ಸಂಗತಿ. ಇಂದು ಷಷ್ಠಿಪೂರ್ತಿ ಆಚರಿಸಿಕೊಳ್ಳುತ್ತಿರುವ ಶ್ರೀಗಳು ಮುಂದೊಂದು ದಿನ ಅಮೃತ ಮಹೋತ್ಸವ ಆಚರಿಸಿಕೊಳ್ಳುವ ಸೌಭಾಗ್ಯ ಪ್ರಾಪ್ತವಾಗಲೆಂದು ಶುಭ ಹಾರೈಸಿದರು.

ನೇತೃತ್ವ ವಹಿಸಿದ ಶ್ರೀನಿವಾಸ ಸರಡಗಿಯ ಡಾ. ರೇವಣಸಿದ್ಧ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಜೀವನದಲ್ಲಿ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಬೇಕು. ಬಾಲ್ಯದಲ್ಲಿ ಜ್ಞಾನ ಯೌವನದಲ್ಲಿ ಸಂಪತ್ತು ಮತ್ತು ವೃದ್ಧಾಪ್ಯದಲ್ಲಿ ಪುಣ್ಯ ಸಂಪಾದಿಸಿಕೊಂಡು ಬಾಳುವುದು ಶ್ರೇಷ್ಠ. ಸುಳ್ಳಿಗೆ ಮೋಸಕ್ಕೆ ಹಲವು ದಾರಿ. ಆದರೆ ಧರ್ಮಕ್ಕೊಂದೇ ದಾರಿ. ಅದುವೇ ಹೆದ್ದಾರಿ. ಯುವ ಜನಾಂಗದಲ್ಲಿ ಅದ್ಭುತ ಶಕ್ತಿಯಿದೆ. ಆ ಶಕ್ತಿ ಜನ ಹಿತಕ್ಕಾಗಿ ಮೀಸಲಾಗಿರಲಿ. ಸಮಾಜದಲ್ಲಿ ಬೆಳೆಯುತ್ತಿರುವ ದುಷ್ಟ ಶಕ್ತಿಗಳು ನಿರ್ನಾಮಗೊಂಡು ಸಾತ್ವಿಕ ಸಮಾಜ ಕಟ್ಟಿ ಬೆಳೆಸುವ ಸಂಕಲ್ಪ ಎಲ್ಲರದು ಆಗಲಿ. ಶ್ರೀ ರಂಭಾಪುರಿ ಜಗದ್ಗುರುಗಳವರ ಆಶೀರ್ವಾದ ನಮ್ಮ ನಿಮ್ಮೆಲ್ಲರ ಮೇಲೆ ಸದಾ ಇರಲೆಂದರು.

ಈ ಪವಿತ್ರ ಸಮಾರಂಭದಲ್ಲಿ ಹೊನ್ನಕಿರಣಗಿ ಚಂದ್ರಗುಂಡ ಶಿವಾಚಾರ್ಯರು ಮತ್ತು ಆಲಮೇಲ ಚಂದ್ರಶೇಖರ ಶಿವಾಚಾರ್ಯರು ಉಪದೇಶಾಮೃತವನ್ನಿತ್ತರು. ಈ ಪವಿತ್ರ ಸಮಾರಂಭದಲ್ಲಿ ಕಲಬುರ್ಗಿ ಡಾ.ರಾಜಶೇಖರ ಶಿವಾಚಾರ್ಯರು, ತೊನಸನಹಳ್ಳಿ ರೇವಣಸಿದ್ಧ ಚರಂತೇಶ್ವರ ಶಿವಾಚಾರ್ಯರು, ಯಂಕಂಚಿ ರುದ್ರಮುನಿ ಶಿವಾಚಾರ್ಯರು, ಓಂಕಾರ ಬೆನ್ನೂರು ಸಿದ್ಧರೇಣುಕ ಶಿವಾಚಾರ್ಯರು, ಮಳಖೇಡ ಅಭಿನವ ಕಾರ್ತಿಕೇಶ್ವರ ಶಿವಾಚಾರ್ಯರು, ಹಲಕರಟಿ ರಾಜಶೇಖರ ಶಿವಾಚಾರ್ಯರು, ಆಳಂದ ಸಿದ್ಧಲಿಂಗ ಶಿವಾಚಾರ್ಯರು, ಮುಳವಾಡ ಸಿದ್ಧಲಿಂಗ ಶಿವಾಚಾರ್ಯರು, ಹನುಮಾಪುರ ಸೋಮಶೇಖರ ಶಿವಾಚಾರ್ಯರು, ಸರಡಗಿ ವೀರಭದ್ರ ಶಿವಾಚಾರ್ಯರು, ಗಿರೆಪ್ಪಾ ಮುತ್ಯಾ, ರಾಜು ಭೀಮಳ್ಳಿ, ಶಿವಶರಣಪ್ಪ ಸೀರಿ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

# ನೂತನ ಕರ್ನಾಟಕ ಫಿಲ್ಮಂ ಅಸೋಸಿಯೇಷನ್ ಆರಂಭ

ಶಿವಮೊಗ್ಗ: ಚಲನ ಚಿತ್ರೋದ್ಯಮದ ಎಲ್ಲಾ ವಿಭಾಗದವರನ್ನು ಗಮನದಲ್ಲಿಟ್ಟುಕೊಂಡು ನೂತನವಾಗಿ ಕರ್ನಾಟಕ ಫಿಲ್ಮಂ ಅಸೋಸಿಯೇಷನ್ ಆರಂಭಿಸಲಾಗಿದೆ ಎಂದು ಅಸೋಸಿಯೇಷನ್ ಸದಸ್ಯ ಡಾ. ಎನ್.ಎಂ. ಪ್ರಹ್ಲಾದ್ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಚಿತ್ರರಂಗದ ಹಿತದೃಷ್ಟಿಯಿಂದ ಹೊಸ ಕಲಾವಿದರು ಹಾಗೂ ಹಿರಿಯ ಕಲಾವಿದರು ಜತೆಗೂಡಿ ಸಂಘವನ್ನು ಸ್ಥಾಪಿಸಲಾಗಿದೆ. ಮೂವಿ ಬ್ಯಾನರ್ ಅಜೀವ ಸದಸ್ಯತ್ವಕ್ಕೆ 5 ಸಾವಿರ ರೂ., ಮೂವಿ ಟೈಟಲ್ ನೋಂದಣಿಗೆ 500 ರೂ. ನಿಗದಿ ಮಾಡಲಾಗಿದೆ ಎಂದರು.

ಸಿನಿಮಾಕ್ಕೆ ಸಂಬಂಧಪಟ್ಟ ಕಲಾವಿದರು, ನಿರ್ದೇಶಕರು, ಕ್ಯಾಮೆರಾಮ್ಯಾನ್, ಡ್ಯಾನ್ಸ್, ಸಂಗೀತ, ಫೈಟ್ ಮಾಸ್ಟರ್ ಹೀಗೆ ಎಲ್ಲಾ ವಿಭಾಗದ ಅಜೀವ ಸದಸ್ಯತ್ವಕ್ಕೆ 2 ಸಾವಿರ ರೂ. ನೋಂದಣಿ ಶುಲ್ಕ ನಿಗದಿ ಮಾಡಲಾಗಿದೆ. ಇಲ್ಲಿ ಸದಸ್ಯತ್ವ ಪಡೆದವರು ಅಸೋಸಿಯೇಷನ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಬಹುದಾಗಿದೆ. ಮತ ಹಾಕುವ ಹಕ್ಕು ಇರುತ್ತದೆ ಎಂದರು.

ಕಲಾವಿದರಲ್ಲಿಯೂ ಸಾಕಷ್ಟು ಬಡವರಿದ್ದಾರೆ. ಅಂತಹವರಿಗೆ ಫುಡ್ ಕಿಟ್ ಸೌಲಭ್ಯ ನೀಡಲು, ಆರೋಗ್ಯ ವೆಚ್ಚಕ್ಕೆ 50 ಸಾವಿರ ನೆರವು ನೀಡಲು ಚಿಂತನೆ ನಡೆಸಲಾಗಿದೆ. ಎಲ್ಲಾ ಜಿಲ್ಲೆಗಳಲ್ಲಿನ ಕಲಾವಿದರು ಇದರಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಅಸೋಸಿಯೇಷನ್ ಅಧ್ಯಕ್ಷ ಎಂ.ಎಸ್. ರವೀಂದ್ರ ಮಾತನಾಡಿ, ಈಗಿರುವ ಫಿಲ್ಮ್ ಛೇಂಬರ್ನ ಸದಸ್ಯತ್ವ ಶುಲ್ಕ ತೀರಾ ದುಬಾರಿಯಾಗಿದೆ. 50 ಸಾವಿರದಿಂದ ಲಕ್ಷದವರೆಗೆ ಸದಸ್ಯತ್ವ ಶುಲ್ಕ ಹಾಗೂ ಮೂವಿ ಬ್ಯಾನರ್ ಶುಲ್ಕವನ್ನು ನಿಗದಿ ಮಾಡಲಾಗಿದೆ. ಇದರಿಂದಾಗಿ ಅನೇಕರು ಚಿತ್ರೋದ್ಯಮವೇ ಬೇಡವೆಂದು ಉದ್ಯಮದಿಂದ ಹೊರ ಹೋಗುವ ಸ್ಥಿತಿ ಇದೆ ಎಂದರು.

ಈ ಅಸೋಸಿಯೇಷನ್ ಆರಂಭವಾಗಿ 5 ತಿಂಗಳಾಗಿದ್ದು, 356 ಜನರು ನೋಂದಣಿ ಮಾಡಿಕೊಂಡಿದ್ದಾರೆ. ಇಲ್ಲಿ ನೋಂದಾಯಿಸಿಕೊಂಡವರಿಗೆ ಸಿನಿಮಾ ಸೆನ್ಸಾರ್ ಸೇರಿದಂತೆ ಎಲ್ಲಾ ರೀತಿಯ ಕೆಲಸಗಳಿಗೆ ಅಸೋಸಿಯೇಷನ್ ಮಾರ್ಗದರ್ಶನ ನೀಡಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಮುಖರಾದ ರಾಧಾ, ಮಂಜುನಾಥ ಬೆಳಕೆರೆ, ಮರಿಯಾ ಮೃದುಲಾ, ಚಿರತೆ ನಾಗರಾಜ್, ಹನು ನಿಗಂ ಇದ್ದರು.

# ಅರೇಮಲ್ಲೇನಹಳ್ಳಿಯಲ್ಲಿ ಮೇವು ಬ್ಯಾಂಕ್ ಆರಂಭ

ತುರುವೇಕೆರೆ: ತಾಲ್ಲೂಕಿನ ದಬ್ಬೇಘಟ್ಟ ಹೋಬಳಿಯ ಅರೇಮಲ್ಲೇನಹಳ್ಳಿ ರಂಗನಾಥ ಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ತಾಲ್ಲೂಕು ಆಡಳಿತ ಹಾಗು ತಾಲ್ಲೂಕು ಪಶು ಸಂಗೋಪನಾ ಇಲಾಖಾ ವತಿಯಿಂದ ಮೇವು ಬ್ಯಾಂಕ್‌ಗೆ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ತಹಶೀಲ್ದಾರ್ ವೈ.ಎಂ.ರೇಣುಕುಮಾರ್ ರವರು ಕಳೆದ ನವೆಂಬರ್‌ನಿಂದ ತಾಲ್ಲೂಕಿನಲ್ಲಿ ಸಮರ್ಪಕವಾಗಿ ಮಳೆಯಾಗದೆ ರೈತರು ಕಂಗಾಲಾಗಿ ಹೋಗಿದ್ದಾರೆ. ಮುಖ್ಯವಾಗಿ ದಬ್ಬೇಘಟ್ಟ ಹೋಬಳಿಯಲ್ಲಿ ಕೆರೆ ಕಟ್ಟೆಗಳು ಬತ್ತಿದ್ದರಿಂದ ಜಾನುವಾರುಗಳಿಗೆ ಕುಡಿಯಲು ನೀರಿಗಾಗಿ ತೊಂದರೆ ಉಂಟಾಯಿತು. ಮತ್ತೊಂದೆಡೆ ಮೇವಿಗೂ ಅಭಾವ ಎದುರಿಸಬೇಕಾಯಿತು.

ಈ ಭಾಗದಲ್ಲಿ ಮೇವು ಬ್ಯಾಂಕ್ ನ್ನು ತೆರೆಯಲಾಗಿದೆ. ಸರ್ಕಾರ ನೀಡಿರುವ ಮೇವು ಬ್ಯಾಂಕ್ ಸೌಲಭ್ಯವನ್ನು ರೈತರು ಸದುಪಯೋಗಪಡಿಸಿಕೊಂಡು ತಮ್ಮ ರಾಸುಗಳನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕೆಂದು ಹೇಳಿದರು. ಕಳೆದ ಎರಡು ದಿನಗಳಿಂದ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ರೈತರ ಸಮಸ್ಯೆಗಳಿಗೆ ಶೀಘ್ರವೇ ಪರಿಹಾರ ಸಿಗಲಿದೆ ಎಂದರು.

ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ರೇವಣ ಸಿದ್ದಪ್ಪ ಮಾತನಾಡಿ ಒಂದು ರಾಸುವಿಗೆ ಪ್ರತಿ ದಿನಕ್ಕೆ 6 ಕೆ.ಜಿಯಂತೆ ವಾರಕ್ಕೆ ಆಗುವಷ್ಟು ಮೇವನ್ನು ಒಂದೇ ಬಾರಿ ನೀಡಲಾಗುತ್ತದೆ. ರೈತರು ತಮ್ಮಲ್ಲಿರುವ ರಾಸುಗಳ ಲೆಕ್ಕದಲ್ಲಿ ಮೇವನ್ನು ಪಡೆಯಬಹುದಾಗಿದೆ. ಅದಕ್ಕಾಗಿ ಪ್ರತಿ ಕೆ.ಜಿಗೆ 2 ರೂಪಾಯಿಗಳನ್ನು ಸಂದಾಯ ಮಾಡಬೇಕಿದೆ.

ವಾರದ ನಂತರ ಮತ್ತೆ ರೈತರು ತಮಗೆ ನೀಡಲಾಗಿರುವ ಮೇವಿನ ಕಾರ್ಡ್ ತಂದು ಮೇವು ಖರೀದಿಸಬಹುದು ಎಂದರು. ಸದ್ಯ ಒಟ್ಟು 342 ಜಾನುವಾರುಗಳಿಗೆ 14.5 ಟನ್ ಮೇವು ವಿತರಿಸಲಾಗಿದೆ ಎಂದರು.

ಈ ಸಂಧರ್ಭದಲ್ಲಿ ಮುಖ್ಯ ಪಶುವೈದ್ಯಾಧಿಕಾರಿ ಡಾ.ಶಶಿಕಿರಣ್, ಜಾನುವಾರು ಅಭಿವೃದ್ಧಿ ಅಧಿಕಾರಿ ಜೆ.ಸಿದ್ದಪ್ಪ, ಹಿರಿಯ ಪಶು ವೈದ್ಯ ಪರಿವೀಕ್ಷಕ ಚಿಕ್ಕರಾಜು, ಕಂದಾಯ ಅಧಿಕಾರಿಗಳು, ಗ್ರಾಮ ಲೆಕ್ಕಿಗರು ಮತ್ತು ರೈತರು ಹಾಜರಿದ್ದರು.

# ಶವ ಸಂಸ್ಕಾರಕ್ಕೆ ಸೂಕ್ತ ವ್ಯವಸ್ಥೆ ಮಾಡಿ



ಕನಕಪುರ: ತಾಲೂಕಿನ ಹಲವು ಗ್ರಾಮಗಳಲ್ಲಿ ಸ್ಮಶಾನ ಜಾಗಕ್ಕೆ ಹತ್ತಾರು ವಿಘ್ನಗಳು ಎದುರಾಗತ್ತಿವೆ. ಒಂದೆಡೆ ಜಾಗದ ವಿವಾದವಿದ್ದರೆ, ಇನ್ನೊಂದೆಡೆ ಶವ ಸಂಸ್ಕಾರಕ್ಕೆ ಸೂಕ್ತ ವ್ಯವಸ್ಥೆ ಇಲ್ಲದೆ ಜನರು ಬದುಕಿದ್ದಾಗ ಸವಲತ್ತುಗಳಿಗೆ ಪ್ರತಿಭಟನೆ ಮಾಡಬೇಕಾಗಿದೆ.

ಅದೇ ರೀತಿ ಮನುಷ್ಯ ಸತ್ತಾಗ ಶವ ಸಂಸ್ಕಾರಕ್ಕೆ ಜಾಗವಿಲ್ಲದೆ ಹೋರಾಟ ಮಾಡುವ ದುಸ್ಥಿತಿ ನಮ್ಮ ತಾಲೂಕಿನಲ್ಲಿದೆ ಎಂದು ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ತಹಸೀಲ್ದಾರ್ ಸ್ಮಿತಾರಾಮ್ ನೇತೃತ್ವದಲ್ಲಿ ಸ್ಮಶಾನ ಜಾಗಗಳ ಮಂಜೂರಾತಿಗಾಗಿ ಏರ್ಪಡಿಸಿದ್ದ ಮುಖಂಡರ ಸಭೆಯಲ್ಲಿ ಸ್ಮಶಾನ ಜಾಗವನ್ನು ಕಾಯ್ದಿರಿಸಿ ಜನರಿಗೆ ಅನುಕೂಲ ಮಾಡಬೇಕೆಂದು ಒತ್ತಾಯಿಸಿಲಾಯಿತು.

ಪ್ರಗತಿಪರ ಸಂಘಟನೆಗಳ ಅಧ್ಯಕ್ಷ ಕುಮಾರಸ್ವಾಮಿ ಮಾತನಾಡಿ, ತಾಲೂಕಿನ ಹಲವು ಗ್ರಾಮಗಳಲ್ಲಿ ಸ್ಮಶಾನವೇ ಇಲ್ಲದೆ, ಶವ ಸಂಸ್ಕಾರಕ್ಕೆ ಪರದಾಡುವ ಸ್ಥಿತಿ ಇದ್ದು, ತಾಲೂಕು ಆಡಳಿತ ಕೂಡಲೇ ಎಚ್ಚೆತ್ತುಕೊಂಡು ಎಲ್ಲ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕಂದಾಯ ಮತ್ತು ಸರ್ವೇ ಇಲಾಖೆ ಅಧಿಕಾರಿಗಳ ಸಭೆ ನಡೆಸಿ, ಜಾಗವಿಲ್ಲದ ಕಡೆ ಜಾಗ ಗುರುತಿಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಕುರುಬಳ್ಳಿಯಲ್ಲಿ ಅಂತ್ಯಕ್ರಿಯೆಗೆ ಜಾಗ ನೀಡುವಂತೆ ಮನವಿ ಮಾಡಿದ್ದು, ಯೋಗ್ಯವಲ್ಲದ ಜಾಗ ನೀಡಿದ್ದಾರೆ. ಜನರನ್ನು ಇಷ್ಟೊಂದು ನಿಕೃಷ್ಟವಾಗಿ ಕಾಣಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಜಾಗೃತಿ ಮಾಜಿ ಅಧ್ಯಕ್ಷ ಜೆ.ಎಂ.ಶಿವಲಿಂಗಯ್ಯ ಮಾತನಾಡಿ, ತಾಲೂಕಿನಲ್ಲಿ ಸ್ಮಶಾನಗಳನ್ನು ಗುರುತಿಸಿದ್ದರೂ ಅವುಗಳ ಅಭಿವೃದ್ಧಿಗೊಳಿಸಿ ಹಸ್ತಾಂತರಿಸದ ಕಾರಣ ಸಮಸ್ಯೆಉಲ್ಬಣವಾಗಿದೆ. ಜಮೀನು ಹೊಂದಿರುವವರಿಗೆ ಯಾವುದೇ ಸಮಸ್ಯೆ ಇಲ್ಲ, ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತುಪಂಗಡ, ಭೂರಹಿತರಿಗೆ ಸ್ಮಶಾನದ ಸಮಸ್ಯೆ ಕಾಡುತ್ತಿದೆ . ರುದ್ರಭೂಮಿಗೆ ಬೇಕಿರುವ ರಸ್ತೆ, ನೀರು ಸೌಲಭ್ಯ ಇನ್ನೂ ಸಿಕ್ಕಿಲ್ಲ, ಗುರ್ತಿಸಿರುವ ಜಾಗಕ್ಕೆ ಬೇಲಿ ಹಾಕಿ ಕಾಯ್ದಿರಿಸಬೇಕು. ನಗರದ ದೇಗುಲಮಠದ ಹಳೆಯ ಸ್ಮಶಾನಕ್ಕೆ ಸಮರ್ಪಕವಾದ ರಸ್ತೆ ಇಲ್ಲ. ಅಲ್ಲಿ ನೆರಳು, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ತಾಪಂ ಅಧಿಕಾರಿ ಮೋಹನ್‌ಬಾಬು, ಸರ್ವೇ ಇಲಾಖೆಯ ಅಧಿಕಾರಿ ನಂದೀಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಜಯಪ್ರಕಾಶ್, ಸಾತನೂರು ಉಪತಹಸೀಲ್ದಾರ್ ಮನೋಹರ್, ಮುಖಂಡರಾದ ನೀಲಿ ರಮೇಶ್, ಗೋಪಿ, ಮಲ್ಲಿಕಾರ್ಜುನ್, ರಾಜಮೌರ್ಯ, ನಟರಾಜ್, ಕೆ.ಆರ್. ಸುರೇಶ್ ಸೇರಿ ಕಂದಾಯ ಇಲಾಖೆ ಅಧಿಕಾರಿಗಳು, ಅನೇಕ ಸ್ಥಳೀಯ ಸಂಘಟನೆಗಳ ಮುಖಂಡರು ಇದ್ದರು.

# ರಾಷ್ಟ್ರೀಯ ಶಿಕ್ಷಣ ನೀತಿ–2020 ಹಿಂಪಡೆಯುವಂತೆ ಮನವಿ

ಶಿವಮೊಗ್ಗ: ರಾಷ್ಟೀಯ ಶಿಕ್ಷಣ ನೀತಿ–2020 ಅನ್ನು ಹಿಂಪಡೆದುಕೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ನಡೆ ಖಂಡಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ವತಿಯಿಂದ ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ದೇಶದಲ್ಲಿ ಭಾರತೀಯ ಶಿಕ್ಷಣ ನೀತಿ ಜಾರಿಗೆ ಬರಬೇಕು. ಅದು ಮುಂದಿನ ಹತ್ತಾರು ವರ್ಷಗಳ ನಂತರ ದೇಶದಲ್ಲಿ ಕೌಶಲ್ಯಯುತ ಯುವ ಶಕ್ತಿ ಹೊರಗಡೆ ಬರಬೇಕು. ಬ್ರಿಟಿಷ್ ಶಿಕ್ಷಣ ನೀತಿಯಿಂದ ಮುಕ್ತರಾಗಿ ಭಾರತೀಯ ಶಿಕ್ಷಣ ನೀತಿ ಪಡೆಯಬೇಕೆಂಬ ಉದ್ದೇಶದಿಂದ ರಾಷ್ಟೀಯ ಶಿಕ್ಷಣ ನೀತಿ –2020 ಅನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದು, ಅದನ್ನು ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ರಾಜ್ಯ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ ಇಂದಿನ ಕಾಂಗ್ರೆಸ್ ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ ರಾಷ್ಟೀಯ ಶಿಕ್ಷಣ ನೀತಿಯನ್ನು ಹಿಂಪಡೆಯುತ್ತೇವೆ ಎಂದು ಹೇಳಿದ ಕಾರಣಕ್ಕೋಸ್ಕರ ಒಂದು ಶಿಕ್ಷಣ ನೀತಿ ಬದಲಾವಣೆ ಮಾಡಲು ಹೊರಟಿರುವ ರಾಜ್ಯ ಸರ್ಕಾರದ ನೀತಿಯನ್ನು ಪ್ರತಿಭಟನಾಕಾರರು ಖಂಡಿಸಿದರು.

ಕೇವಲ ರಾಜಕೀಯ ಕಾರಣಕ್ಕೋಸ್ಕರ ಒಂದು ಉತ್ತಮ ಪ್ರಯೋಗಶೀಲ ಶಿಕ್ಷಣ ಪದ್ಧತಿಯನ್ನು ಬದಲಾವಣೆ ಮಾಡಿ ಲಕ್ಷಾಂತರ ವಿದ್ಯಾರ್ಥಿಗಳ ಜೀವನದಲ್ಲಿ ಆಟವಾಡಲು ಹೊರಟಿರುವ ಸರ್ಕಾರದ ನಡೆ ನಿಜಕ್ಕೂ ಮುಂದಿನ ದಿನಗಳಲ್ಲಿ ಬಹುದೊಡ್ಡ ಮಾರಕವಾಗಲಿದೆ. ಎನ್‌ಇಪಿ ಜಾರಿ ಮಾಡಿದ ಕಾರಣಕ್ಕೋಸ್ಕರ ನೂರಾರು ಕೋಟಿ ರೂ. ಅನುದಾನವನ್ನು ಪಿಎಂ ಉಷಾ ಯೋಜನೆಯಡಿಯಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಕೇಂದ್ರ ಸರ್ಕಾರ ನೀಡಿದೆ. ಒಂದು ವೇಳೆ ಎನ್‌ಇಪಿ ರದ್ದುಪಡಿಸಿದ್ದೇ ಆದಲ್ಲಿ ವಿಶ್ವವಿದ್ಯಾಲಯದ ನೀಡಿದ ಅನುದಾನವನ್ನು ರಾಜ್ಯ ಸರ್ಕಾರ ಕಳೆದುಕೊಳ್ಳಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ರಾಜ್ಯ ಸರ್ಕಾರ ಈ ನಿರ್ಧಾರದಿಂದ ಹಿಂದೆ ಸರಿದು ಎನ್‌ಇಪಿಯಲ್ಲಿ ಆಗಿರುವ ಲೋಪದೋಷಗಳನ್ನು ಸರಿ ಮಾಡಿ ರಾಜ್ಯದಲ್ಲಿ ಸಮರ್ಪಕವಾದ ಎನ್‌ಇಪಿ ಮಾಡಿ ಈ ದೇಶದ ಶಿಕ್ಷಣ ಪದ್ಧತಿಯೊಂದಿಗೆ ಕರ್ನಾಟಕ ರಾಜ್ಯವನ್ನಾಗಿ ತೆಗೆದುಕೊಂಡು ಹೋಗುವ ಮಹತ್ತರ ಜವಾಬ್ದಾರಿಯನ್ನು ಮಾಡಬೇಕು ಎಂದು ಆಗ್ರಹಿಸಿದರು.

ಒಂದು ವೇಳೆ ರಾಷ್ಟೀಯ ಶಿಕ್ಷಣ ನೀತಿಯನ್ನು ರದ್ದುಪಡಿಸಿದ್ದೇ ಆದಲ್ಲಿ ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಬೇಕಾದೀತು ಎಂದು ಮನವಿಯಲ್ಲಿ ಸರ್ಕಾರಕ್ಕೆ ಎಚ್ಚರಿಸಲಾಗಿದೆ. ಪ್ರತಿಭಟನೆಯಲ್ಲಿ ಎಬಿವಿಪಿ ರಾಜ್ಯ ಕಾರ್ಯದರ್ಶಿ ಹೆಚ್.ಕೆ. ಪ್ರವೀಣ್, ನಗರ ಕಾರ್ಯದರ್ಶಿ ರಘುನಂದನ್ ಹೆಗ್ಡೆ, ಲೋಹಿತ್, ಬಿ. ಅಭಿಷೇಕ್, ವರುಣ್, ಮನೋಜ್, ವೇದಶ್ರೀ ಇನ್ನಿತರರು ಉಪಸ್ಥಿತರಿದ್ದರು.

# ರೈತರ ಖಾತೆಗೆ ನೇರ ಹಣ

ಇಂಡಿ: ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಉಂಟಾದ ಬೆಳೆ ಹಾನಿಗೆ ಅರ್ಹತೆಯಂತೆ ಬೆಳೆ ಹಾನಿ ಮೊತ್ತವನ್ನು ರೈತರ ಖಾತೆಗಳಿಗೆ ನೇರವಾಗಿ ಸರಕಾರದಿಂದ ಡಿಬಿಟಿ ಮೂಲಕ ಹಣ ಬಿಡುಗಡೆ ಮಾಡಲಾಗಿದೆ ಎಂದು ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ತಿಳಿಸಿದ್ದಾರೆ.

ರೈತರು ತಮ್ಮ ಖಾತೆಗೆ ಜಮಾ ಆಗಿರುವ ಹಣದ ಕುರಿತು ಪರಿಶೀಲಿಕೊಂಡು ಬೆಳೆ ಹಾನಿ ಪರಿಹಾರ ಜಮಾ ಅಗದೇ ಇದ್ದ ಸಂದರ್ಭದಲ್ಲಿ 08359 225020, 08359 225003 ಗೆ ಸಂಪರ್ಕಿಸಲು ಗದ್ಯಾಳ ತಿಳಿಸಿದ್ದಾರೆ.

ಅದಲ್ಲದೆ ರೈತರಿಗೆ ಪರಿಹಾರ ಬರದಿದ್ದರೆ ರೈತರು ತಮ್ಮ ಖಾತೆಗೆ ಆಧಾರ ಲಿಂಕ ಮತ್ತು ಇಕೆವೈಸಿ ಮಾಡಿಸಬೇಕು. ಅದಲ್ಲದೆ ರೈತರು ಎಫ್‌ಐಡಿ ಮತ್ತು ಎನ್‌ಪಿಸಿಐ ಮಾಡಿಸಿರಬೇಕು. ಅದಲ್ಲದೆ ರೈತರು ಬ್ಯಾಂಕಿಗೆ ಹೋಗಿ ಅಕೌಂಟ್ ರಿ ಓಪನ್ ಪಾಡಿಸಬೇಕು. ಪ್ರುಟ್ ತಂತ್ರಾಂಶ ಹೆಸರು ಅಪ್ಲೆಡ್ ಆಗಿರಬೇಕು. ಸದರಿ ಫಲಾನುಭವಿಗಳು ಬ್ಯಾಂಕಿಗೆ ಹೋಗಿ ಎನ್‌ಪಿಸಿಐ ಮಾಡಿಸಬೇಕೆಂದು ಗದ್ಯಾಳ ತಿಳಿಸಿದ್ದಾರೆ.

ಇಂಡಿ ತಾಲೂಕಿನ 42320 ರೈತರಿಗೆ 64 ಕೋಟಿ 71 ಲಕ್ಷ 96,795 ರೂ ಹಣ ಬಿಡುಗಡೆಯಾಗಿದೆ ಎಂದರು.

ಟಿ. ದಾಸರಹಳ್ಳಿ : ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ವರ ನಟ ಡಾ. ರಾಜಕುಮಾರ್ ಹುಟ್ಟು ಹಬ್ಬದ ಅಂಗವಾಗಿ ಪ್ರಜಾಹಿತ ಸಂರಕ್ಷಣಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿದ ಸಾಧಕರುಗಳಿಗೆ ಪ್ರತಿಷ್ಠಿತ ರಾಜ್ಯ ಪ್ರಶಸ್ತಿ ನೀಡಿ ಪುರ ಸ್ಕರಿಸಲಾಯಿತು. ಕಾರ್ಯಕ್ರಮದ ಘನ ಉಪಸ್ಥಿತಿಯಲ್ಲಿ ವೇದಶ್ರೀ ಸತ್ಸಂಗ ಶ್ರೀ ಅಜಿತ್ ಗುರೂಜಿ, ವಿಶ್ರಾಂತ ನ್ಯಾಯಮೂರ್ತಿ ಸಂತೋಷ ಹೆಗಡೆ, ಚಿತ್ರನಟ ಸರಿಗಮ ವಿಜಿ, ಖ್ಯಾತ ಗಾಯಕಿ ರಮ್ಯಾ ವಸಿಷ್ಠ, ಹಲವು ಗಣ್ಯರು ಭಾಗವಹಿಸಿದ್ದರು. ಉದ್ಯಮ ಹಾಗೂ ಸಮಾಜಸೇವಾ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಡಾ. ಸುಭಾಷಿಣಿ ರವರಿಗೆ ಪ್ರತಿಷ್ಠಿತ ಮದರ್ ತೆರೇಸಾ ರಾಷ್ಟೀಯ ಸದ್ಭಾವನಾ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.





# ಪರ್ಲ್ ಅಕಾಡೆಮಿಯಲ್ಲಿ 'ಪೋರ್ಟ್ ಪೋಲಿಯೊ 2024'

ಬೆಂಗಳೂರು: ವಿದ್ಯಾರ್ಥಿಗಳ ಐಡಿಯಾಗಳು, ಆವಿಷ್ಕಾರ ಮತ್ತು ಜಾಣ್ಮೆಯನ್ನು ಸಂಭ್ರಮಿಸುವ ಪರ್ಲ್ ಅಕಾಡೆಮಿ ತನ್ನ ಬೆಂಗಳೂರು ಕ್ಯಾಂಪಸ್ ನಲ್ಲಿ ತನ್ನ ವಾರ್ಷಿಕ ಕಾರ್ಯಕ್ರಮ 'ಪೋರ್ಟ್ ಪೋಲಿಯೊ 2024' ಪ್ರಸ್ತುತಪಡಿಸಿತು.

ಭಾರತದ ತಂತ್ರಜ್ಞಾನ ಕೇಂದ್ರ ಬೆಂಗಳೂರಿನಲ್ಲಿ ನಡೆದ ಈ ಪ್ರದರ್ಶನವು ಸಂಚಲನಾತ್ಮಕ ತಂತ್ರಜ್ಞಾನದ ಸುತ್ತಲೂ ಚಿಂತನೆಗೆ ಹಚ್ಚುವ ಪರಿಕಲ್ಪನೆಗಳ ಮೂಲಕ ನಗರದ ಸೃಜನಶೀಲ ಮತ್ತು ಆವಿಷ್ಕಾರಕ ಸಂವಾದಗಳನ್ನು ನಡೆಸಿತು.

ಈ ಕಾರ್ಯಕ್ರಮವು ವರ್ಚುಯಲ್ ಜಗತ್ತಿನಲ್ಲಿ ಅಲೆಮಾರಿಗಳಂತೆ ಇರುವ ಡಿಜಿಟಲ್ ನೇಟಿವ್ ಗಳಿಂದ ಸ್ಫೂರ್ತಿ ಪಡೆದ 'ಟೆಕ್ ನೊಮ್ಯಾಡ್ಸ್' ವಸ್ತು ಆಧರಿಸಿತ್ತು. ಪ್ರದರ್ಶಿಸಲಾದ ಪ್ರಾಜೆಕ್ಟ್ ಗಳು ತಂತ್ರಜ್ಞಾನ ಮತ್ತು ಸೃಜನಶಿಲತೆಯ ಆಸಕ್ತಿದಾಯಕ ಸಂಯೋಜನೆಯಾಗಿದ್ದವು.




ಪರ್ಲ್ ಅಕಾಡೆಮಿ ಅಧ್ಯಕ್ಷೆ ಅದಿತಿ ಶ್ರೀವಾಸ್ತವ ಮತ್ತು ಪರ್ಲ್ ಅಕಾಡೆಮಿ ಬೆಂಗಳೂರಿನ ರೀಜನಲ್ ಕ್ಯಾಂಪಸ್ ಡೈರೆಕ್ಟರ್ ಸನ್ಯೋಗಿತಾ ಛಾಧಾ, ಫ್ಯಾಷನ್, ಬಿಸಿನೆಸ್, ಇಂಟೀರಿಯರ್ ಡೀನ್ ಆಂಟೊನಿಯೊ ಮೌರಿಜೊ ಗ್ರಿಯೊಳಿ ಮತ್ತು ಕಮ್ಯುನಿಕೇಷನ್, ಡಿಸೈನ್, ಫಿಲ್ಮ್ ಅಂಡ್ ಗೇಮಿಂಗ್ ಡೀನ್ ಸಿ.ಬಿ. ಅರುಣ್ ಅವರೊಂದಿಗೆ ಉದ್ಯಮದ ಖ್ಯಾತನಾಮರು ಮತ್ತು ಗಣ್ಯ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪರ್ಲ್ ಅಕಾಡೆಮಿಯು ಇತ್ತೀಚೆಗೆ ಎಫ್.ಡಿ.ಸಿ.ಐ.ನೊಂದಿಗೆ ತನ್ನ ಸುದೀರ್ಘ ಬಾಂಧವ್ಯವನ್ನು ಸದೃಢಗೊಳಿಸಿದ್ದು ಅಲ್ಪಾವಧಿ ಕೋರ್ಸ್ ಗಳಿಗೆ ಕೋ-ಸರ್ಟಿಫಿಕೇಷನ್ ಮತ್ತು ಪ್ರಮುಖ ಭಾರತೀಯ ಫ್ಯಾಷನ್ ಡಿಸೈನರ್ ಗಳಿಂದ ಮಾಸ್ಟರ್ ಕ್ಲಾಸ್ ಅಲ್ಲದೆ ವಿದ್ಯಾರ್ಥಿಗಳಿಗೆ ಮೌಲ್ಯಯುತ ಕಲಿಕಾ ಅನುಭವಗಳು ಮತ್ತು ಉದ್ಯಮದ ನೇರ ಅನುಭವ ಪಡೆದುಕೊಳ್ಳಲು ನೆರವಾಗುತ್ತಿದೆ.

ಎಫ್.ಡಿ.ಸಿ.ಐ. ಸಹಯೋಗವು ವಿದ್ಯಾರ್ಥಿಗಳಿಗೆ ಅವರ ಕಲೆಯನ್ನು ಲ್ಯಾಕ್ಮೆ ಫ್ಯಾಷನ್ ವೀಕ್ ಮತ್ತು ಇಂಡಿಯಾ ಕೊಟ್ಯೂರ್ ವೀಕ್ ಗಳಲ್ಲಿ ಪ್ರದರ್ಶಿಸಲು ಅವಕಾಶ ಕಲ್ಪಿಸಿತು.

# ಋತುಮತಿಯಾಗುವ ಬಗ್ಗೆ ಬಾಲಕಿಯರಿಗೆ ಅರಿವು

ಬೆಂಗಳೂರು: ಪ್ರಾಕ್ಟರ್ ಅಂಡ್ ಗ್ಯಾಂಬಲ್ ನಿಂದ ಭಾರತದ ಮುಂಚೂಣಿಯ ಮಹಿಳೆಯರ ಆರೈಕೆಯ ಬ್ರಾಂಡ್ ವ್ಹಿಸ್ಪರ್ ಬಾಲಕಿಯರಲ್ಲಿ ಅತ್ಯಂತ ಕಿರಿಯ ವಯಸ್ಸಿನಲ್ಲಿ ಋತುಮತಿಯರಾಗುವ ಕುರಿತು ಅರಿವನ್ನು ಮೂಡಿಸುವ ಪ್ರಯತ್ನವನ್ನು ತನ್ನ #ಕೀಪ್ ಗರ್ಲ್ಸ್ ಇನ್ ಸ್ಕೂಲ್(ಕೆಜಿಐಎಸ್) ಚಳವಳಿಯ ಭಾಗವಾಗಿ ಪ್ರಾರಂಭಿಸಿದೆ. ಬಾಲಕಿಯರು ಅತ್ಯಂತ ಕಿರಿಯ ಅಂದರೆ 8ನೇ ವರ್ಷದಿಂದ ಋತುಮತಿಯರಾಗುತ್ತಿದ್ದು ಅವರಿಗೆ ಅರಿವು ಮೂಡಿಸುವುದು ಬಹಳ ಮುಖ್ಯವಾಗಿದ್ದು ಮುಟ್ಟಿನ ಕುರಿತಾದ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ಲಭ್ಯತೆ ಇಲ್ಲದೆ 26 ಮಿಲಿಯನ್ ಬಾಲಕಿಯರು ಶಾಲೆಯನ್ನು ತ್ಯಜಿಸುತ್ತಿದ್ದಾರೆ.* ಅಧ್ಯಯನಗಳ ಪ್ರಕಾರ ಐದು ಬಾಲಕಿಯರಲ್ಲಿ ಒಬ್ಬರು ಋತುಚಕ್ರದ ಕುರಿತಾದ ಶಿಕ್ಷಣ ಮತ್ತು ಸಂಬಂಧಿಸಿದ ಉತ್ಪನ್ನಗಳ ಲಭ್ಯತೆ ಇಲ್ಲದೆ ಶಾಲೆ ತ್ಯಜಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಬಳಕೆ ಶೇ.47ರಷ್ಟಿದ್ದು ಕಳೆದ 12 ತಿಂಗಳಿಂದ ಶೇ.53ರಷ್ಟು ಮನೆಗಳಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ಗಳನ್ನು ಬಳಸಿಲ್ಲ. ಗ್ರಾಮೀಣ ಕರ್ನಾಟಕದಲ್ಲಿ ಈ ಪ್ರಮಾಣ ಶೇ.30ಕ್ಕಿಂತ ಕಡಿಮೆಇದೆ. ವ್ಹಿಸ್ಪರ್ ನ ಹೊಸ ಭಾವನಾತ್ಮಕ ಚಿತ್ರವು ಋತುಚಕ್ರದ ಕುರಿತು ಅರಿವೇ ಇಲ್ಲದ




8 ವರ್ಷದ ಕಿರಿಯ ಬಾಲಕಿಯರನ್ನು ಹೊಂದಿದೆ ಮತ್ತು ಅವರು ತಮ್ಮ ಮಿತ್ರರಲ್ಲಿ ಒಬ್ಬರಿಗೆ ಅನಿರೀಕ್ಷಿತ ರಕ್ತಸ್ರಾವದ ಸಂಭವನೀಯ ಕಾರಣಗಳ ಕುರಿತು ಹೇಳುವುದನ್ನು ಹೊಂದಿದೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
18 SATURDAY MAY 2024
18 ಶನಿವಾರ ಮೇ 2024

# ತೊರ್ನಹಳ್ಳಿಯಲ್ಲಿ ಅದ್ದೂರಿಯಾಗಿ ನಡೆದ ಹಸಿಕರಗ ಮಹೋತ್ಸವ

ಮಾಲೂರು: ತಾಲ್ಲೂಕಿನ ಕಸಬಾ ಹೋಬಳಿಯ ತೊರ್ನಹಳ್ಳಿ ಗ್ರಾಮದಲ್ಲಿ ಶ್ರೀ ದ್ರೌಪತಾಂಭ ಹಾಗೂ ಶ್ರೀ ಧರ್ಮರಾಯ ಸ್ವಾಮಿಯ 58ನೇ ವರ್ಷದ ಹಸಿಕರಗ ಮಹೋತ್ಸವ ಗುರುವಾರ ರಾತ್ರಿ ವಿಜೃಂಭಣೆಯಿಂದ ನೆರವೇರಿತು. ಉತ್ಸವದ ಅಂಗವಾಗಿ ದೇವಾಲಯಕ್ಕೆ ವಿಶೇಷ ವಿದ್ಯುತ್ ದೀಪ ಅಲಂಕಾರ ಮಾಡಲಾಗಿತ್ತು. ದೇವರಿಗೆ ಅಭಿಷೇಕ, ಹೂವಿನ ಅಲಂಕಾರ ಮಾಡಲಾಗಿತ್ತು.



ಪೂಜೆ ಸಲ್ಲಿಸುವ ಮೂಲಕ ಕರಗದ ಪೂಜಾರಿಗಳಾದ ಮಾರೇಶ, ರಾಮಕೃಷ್ಣಪ್ಪ, ಶ್ರೀನಿವಾಸ್ ರವರು ಹಸಿಕರಗವನ್ನು ಕೈಯಲ್ಲಿ ಹಿಡಿದು ಊರಿನ ತುಂಬಾ ನೃತ್ಯ ಮಾಡಿದರು. ಕರಗಕ್ಕೆ ಮಲ್ಲಿಗೆ ಹೂವು ಎಸೆಯುತ್ತ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು. ವೀರಕುಮಾರರು ಕತ್ತಿಗಳನ್ನು ಹಿಡಿದು ಗೋವಿಂದ ಗೋವಿಂದ ಗೋವಿಂದ ಘೋಷಣೆಗಳನ್ನು ಕೂಗುತ್ತ, ಡಿಕ್ ಡಿ ಡಿಕ್ ಡಿ ಎಂದು ಅಲಗು ಮಾಡುತ್ತಾ, ಕರಗದ ಹಿಂದೆ ಹೆಜ್ಜೆ ಹಾಕಿದರು.

ಈ ಸಂದರ್ಭದಲ್ಲಿ ಶ್ರೀ ವಿ.ಮುನಿಯಪ್ಪ, ಟಿ.ಸಿ ಶ್ರೀನಿವಾಸ್, ಟಿ.ಆರ್.ರಮೇಶ್ ಬಾಬು, ಟಿ.ಎಂ.ರೋಜಾ ರಾಜಪ್ಪ, ಗೌಡರ ನಾರಾಯಣಪ್ಪ, ಕೃಷ್ಣಪ್ಪ(ಟಿಸಿಕೆ), ಟಿ.ಸಿ.ನಾರಾಯಣಪ್ಪ, ಟಿ.ಪಿ.ರಾಜಣ್ಣ, ತಾತೆಪ್ಪ, ನಾರಾಯಣಪ್ಪ, ಎಸ್.ರಾಮಪ್ಪ ಸೇರಿದಂತೆ ಇತರರು ಇದ್ದರು.

ದಿನಾಂಕ:19.05.2024ರ ಭಾನುವಾರ ಹೂವಿನ ಕರಗ ನಡೆಯಲಿದ್ದು, ಈ ಕರಗ ಮಹೋತ್ಸವ ಕಾರ್ಯಕ್ರಮಕ್ಕೆ ತೊರ್ನಹಳ್ಳಿ, ಬೈರನಹಳ್ಳಿ, ಸೊಣ್ಣನಾಯಕನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸುವಂತೆ ಶ್ರೀ ಧರ್ಮರಾಯ ಸ್ವಾಮಿ ಸೇವಾ ಟ್ರಸ್ಟ್ (ರಿ), ಶ್ರೀ ದ್ರೌಪತಾಂಭ ಯುವಕರ ಸಂಘ(ರಿ), ಶ್ರೀ ದ್ರೌಪತಾಂಭ ವೀರಕುಮಾರರ ಸಂಘ(ರಿ), ತೊರ್ನಹಳ್ಳಿ ರವರು ತಿಳಿಸಿದ್ದಾರೆ.

# ಕೇಬಲ್ ಕಳ್ಳರ ಬಂಧನ

ಕೊರಟಗೆರೆ :– ರೈತಾಪಿ ಜನರಿಗೆ ತಲೆ ನೋವಾಗಿ ಪರಿಣಮಿಸಿದ್ದ ಕೇಬಲ್ ಕಳ್ಳರನ್ನ ರಾಜಧಾನಿ ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ಕೊರಟಗೆರೆ ಪೊಲೀಸ್ ನವರು ಮಾಲು ಸಹಿತ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೊರಟಗೆರೆ ತಾಲೂಕಿನ ಕೋಳಾಲ, ಹೊಳವನಹಳ್ಳಿ , ತೋವಿನಕೆರೆ, ಕಸಬಾ ಸೇರಿದಂತೆ ಹಲವು ಪ್ರದೇಶಗಳಲ್ಲಿ ರಾತ್ರಿ ವೇಳೆ ರೈತರ ಬೋರ್ವೆಲ್ ಗಳಿಗೆ ಅಳವಡಿಸಲಾಗಿದ್ದ ಕೇಬಲ್ ವೈರ್ ಕಳ್ಳತನ ಮಾಡಿ ಕಾರಿನಲ್ಲಿ ಬೆಂಗಳೂರಿಗೆ ಸಾಗಿಸುತ್ತಿದ್ದ ಬೆಂಗಳೂರು ಮೂಲದ ಕಾಮಾಕ್ಷಿಪಾಳ್ಯದ ವೆಂಕಟೇಶ್, ರಾಘವೇಂದ್ರ, ವಿನ್ನಿಸ್ ಪಾಟೀಲ್ ಎಂಬ 3 ಜನ ಖತರ್ನಾಕ್ ಕಳ್ಳರನ್ನ ಕೊರಟಗೆರೆ ಪೊಲೀಸ್ ನವರು ಎಡಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಕೊರಟಗೆರೆ ತಾಲೂಕಿನಲ್ಲಿ 2 ವರ್ಷಗಳಿಂದ ಮಳೆ ಬೆಳೆ ಇಲ್ಲದೆ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಲುಗಿ ಹೋದ ಸಂದರ್ಭದಲ್ಲಿ ಕೇಬಲ್ ಕಳ್ಳತನ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿತ್ತು, ಈಗ ಬೆಂಗಳೂರಿನ ಮೂಲದ ಕೇಬಲ್ ಕಳ್ಳರನ್ನ ಕೊರಟಗೆರೆ ಸಿಪಿಐ ಅನಿಲ್ ಮಾರ್ಗದರ್ಶನದಂತೆ ಪಿಎಸ್ಐ ಮಂಜುನಾಥ ನೇತೃತ್ವದಲ್ಲಿ ಪೊಲೀಸ್ ಪೇದೆಗಳಾದ ಮೋಹನ್, ದೊಡ್ಡ ಲಿಂಗಯ್ಯ ಎಚ್ ಸಿ ಸಂಜು ರಾಜು ಅವರ ತಂಡ ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ತಲೆಮರೆಸಿಕೊಂಡಿದ್ದ ಖತರ್ನಾಕ್ ಕಳ್ಳರನ್ನ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ, ಕಳ್ಳರಿಂದ ಕಳ್ಳತನಕ್ಕೆ ಬಳಸಲಾಗುತ್ತಿದ್ದ ಕೆ ಎ 02 ಎಎಫ್ 7351 ಇಂಡಿಕಾ ಕಾರನ್ನ ವಶಪಡಿಸಿಕೊಂಡಿದ್ದು ಮೂರು ಜನ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳಿಸಲಾಗಿದೆ ಎನ್ನಲಾಗಿದೆ.

ಈ ಸಂಬಂಧ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೇಬಲ್ ಕಳ್ಳರ ಎಡಮುರಿ ಕಟ್ಟಿದ ಕೊರಟಗೆರೆ ಪೊಲೀಸ್ ಕಾರ್ಯಾಚರಣೆಗೆ ಮಧುಗಿರಿ ಡಿವೈಎಸ್ಪಿ ರಾಮಚಂದ್ರಪ್ಪ, ಅಡಿಷನಲ್ ಎಸ್ಪಿ ಖಾದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ ವಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.







# ಧಾರಾಕಾರ ಮಳೆಗೆ ಕೊಚ್ಚಿ ಹೋದ ಈರುಳ್ಳಿ ಬೆಳೆ

ಗುಂಡ್ಲುಪೇಟೆ:ತಾಲೂಕಿನ ಬಹುತೇಕ ಭಾಗಗಳಲ್ಲಿ ಉತ್ತಮ ಮಳೆ ಬಿದ್ದಿದೆ ಬಂಡೀಪುರದ ಅರಣ್ಯ ಪ್ರದೇಶಗಳುಪಟ್ಟಣ, ಬರಗಿ, ಬೇಗೂರು ಹಾಗೂ ತೆರಕಣಾಂಬಿ ಸೇರಿದಂತೆ ಸಂಜೆಯಿಂದಲೇಮಳೆಸುರಿದಿದೆ

ಇಲ್ಲಿಯವರೆಗೆ ಕಡಿಮೆ ಮಳೆ ಬಿದ್ದಿದ್ದ ಬೇಗೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾರಿಮಳೆಬಿದ್ದು ಜಮೀನುಗಳಲ್ಲಿ ನೀರು ನಿಂತಿದೆ.

ಇತ್ತೀಚೆಗೆ ರೈತರು ತಮ್ಮ ಜಮೀನುಗಳಲ್ಲಿ ಸೂರ್ಯಕಾಂತಿ ಜೋಳ ಹಾಗೂ ಹತ್ತಿಭಿತ್ತನೆ ಮಾಡಿದ್ದರು. ನಾಳಡ ಮಳೆಯಿಂದಾಗಿ ಆಗಿರುವ ನಷ್ಟದ ಅಂದಾಜು ಮಾಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.




ಬೇಗೂರಿನ ಜಯರಾಮ್ ಎಂಬುವವರು ಅನ್ಯ ವ್ಯಕ್ತಿ ಜಮೀನು ಗುತ್ತಿಗೆ ನೀಡಿದರು ಇದರಲ್ಲಿ ಐದು ಎಕರೆ ಈರುಳ್ಳಿ ಹಾಕಲಾಗಿತ್ತು ಧಾರಾಕಾರವಾಗಿ ಸುರಿದ ಮಳೆಗೆ ಐದು ಎಕರೆ ಈರುಳ್ಳಿ ಕೊಚ್ಚಿಕೊಂಡು ಹೋಗಿರುವ ಘಟನೆ ನಡೆದಿದೆ ರಾಷ್ಟ್ರೀಯ ಹೆದ್ದಾರಿ ಮೇಲೆ ಹಾಗೂ ರಸ್ತೆಯ ಬದಿಯ ಹಳ್ಳಕೊಳ್ಳಗಳಲ್ಲಿ ಪ್ರವಾಹದೋಪಾದಿಯಲ್ಲಿ ಮಳೆನೀರು ಹರಿಯುತ್ತಿದೆ. ಇದರಿಂದಾಗಿ ಸವಾರರು ಹೆಡ್ ಲೈಟ್ ಹಾಕಿಕೊಂಡು ವಾಹಕಗಳನ್ನು ಚಲಾಯಿಸಿದರು.



## ವಿಶ್ವ ಕನ್ನಡ ಹಬ್ಬಕ್ಕೆ ಖ್ಯಾತ "ನಾಟ್ಯ ತರಂಗ ಭರತನಾಟ್ಯ ತಂಡ " ನೇಮಕ

ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಸಿಂಗಾಪುರದಲ್ಲಿ ಆಯೋಜಿಸಿರುವ "ಎರಡನೇ ವಿಶ್ವ ಕನ್ನಡ ಹಬ್ಬ"ದಲ್ಲಿ ಭರತನಾಟ್ಯದಲ್ಲಿ ಹೆಚ್ಚು ಪ್ರಸಿದ್ಧರಾಗಿ ನೂರಾರು ರಾಜ್ಯ, ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವ ನಾಟ್ಯ ತರಂಗ ತಂಡದ ಪ್ರತಿಭೆಗಳಾದ ಸಮುದ್ಯತ, ಸಮನ್ವಿತಾ, ಚಂದನ, ಅರಭಿ, ಸ್ನೇಹ, ಭವಾನಿ, ಭವ್ಯ, ಜನಾರ್ಧನ ಹಾಗೂ ವರಧಾಂಭಿಕ ಇವರು ಭರತನಾಟ್ಯ ಪ್ರದರ್ಶನಕ್ಕೆ ಆಯ್ಕೆಯಾಗಿದ್ದು, ಇವರಿಗೆ ವಿಶ್ವ ಕನ್ನಡ ಹಬ್ಬದ ಸರ್ವಾಧ್ಯಕ್ಷ ಡಾ. ಸಿ. ಸೋಮಶೇಖರ್ ರವರು ಆದೇಶ ಪತ್ರ ನೀಡಿ ಅಭಿನಂದನೆಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷ ಶಿವಕುಮಾರ್ ನಾಗರ ನವಿಲೆ ದಿನೇಶ್ ಜೋಶಿ, ಶ್ರೀ ಹರ್ಷ ಅಶೋಕ್ ನೀಲಾಪಂತ, ಗಾಯಕ ಮೋಹನ್ ಕೃಷ್ಣ, ನಟಿ ರೂಪಿಕಾ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

# ಚನ್ನಮ್ಮನಪಾಳ್ಯ ಸರಕಾರಿ ಶಾಲೆ ಸ್ಥಳಾಂತರ ಬೇಡ

ರಾಮನಗರ: ಜಲ್ಲಿ ಕ್ರಷರ್ ಘಟಕದ ಮಾಲೀಕರೊಬ್ಬರ ಚಿತಾವಣೆಯಿಂದ ಸರಕಾರಿ ಶಾಲೆಯನ್ನು ಸ್ಥಳಾಂತರಿಸುವ ಸಂಚು ನಡೆದಿದೆ. ಅಧಿಕಾರಿಗಳು ಷಡ್ಯಂತ್ರಕ್ಕೆ ಮಣಿಯಬಾರದು, ಶಾಲೆಯನ್ನು ನಮ್ಮೂರಲ್ಲಿಯೇ ಉಳಿಸಬೇಕು ಎಂದು ಚನ್ನಮ್ಮನಪಾಳ್ಯ ಗ್ರಾಮಸ್ಥರು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.



ತಾಲ್ಲೂಕಿನ ಭೈರಮಂಗಲ ಗ್ರಾಪಂ ವ್ಯಾಪ್ತಿಯ ಚನ್ನಮ್ಮನಪಾಳ್ಯ ಗ್ರಾಮದಲ್ಲಿ ಕಳೆದ 25 ವರ್ಷಗಳಿಂದ ನಿರ್ವಹಣೆಯಲ್ಲಿರುವ ಸರಕಾರಿ ಪ್ರಾಥಮಿಕ ಶಾಲೆಯನ್ನು ಜಲ್ಲಿಕಲ್ಲು ಕ್ರಷರ್ ಘಟಕದ ಮಾಲೀಕರ ಒತ್ತಡಕ್ಕೆ ಮಣಿದು ಬೇರೆಡೆಗೆ ಸ್ಥಳಾಂತರಿಸುವ ಹುನ್ನಾರ ನಡೆಯುತ್ತಿದೆ. ಈ ಕುರಿತು ಪ್ರಶ್ನಿಸುವವರ ವಿರುದ್ಧ ಬೇರೆ ಗ್ರಾಮದ ದಲಿತ ಸಮುದಾಯದವರನ್ನು ಎತ್ತಿಕಟ್ಟುವ ಮೂಲಕ ದೌರ್ಜನ್ಯದ(ಅಟ್ರಾಸಿಟಿ) ಕೇಸ್ ಹಾಕಿಸಲಾಗುತ್ತಿದೆ. ಒಳ್ಳೆಯ ದಾಖಲಾತಿಯೊಂದಿಗೆ ಉತ್ತಮ ಸ್ಥಿತಿಯಲ್ಲಿರುವ ಶಾಲೆಯನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಿಸಬಾರದು ಎಂದು ಗ್ರಾಮಸ್ಥರು ಮನವಿ ಮಾಡಿದರು.

**ಶಾಲೆಗೆ 20 ಗುಂಟೆ ನೀಡಿದ ದಾನಿಗಳು:**

1998–99ನೇ ಸಾಲಿನಲ್ಲಿ ಚನ್ನಮ್ಮನಪಾಳ್ಯ ಗ್ರಾಮದ ಕೆ.ಜಯಮ್ಮ ಮತ್ತು ಸಿ.ಎನ್.ನರಸಿಂಹಯ್ಯ ಎಂಬುವರು ಸರ್ವೆ ನಂ. 354ರ ತಮ್ಮ ಜಮೀನಿನ ಪೈಕಿ 20 ಗುಂಟೆ ಜಾಗವನ್ನು ಸರಕಾರಿ ಶಾಲೆಗಾಗಿ ದಾನ ನೀಡಿದ್ದು, 1999ರ ಮಾರ್ಚ್ 8ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಹೆಸರಿಗೆ ನೋಂದಣಿ ಮಾಡಿರುವುದು ದಾಖಲೆಗಳಿಂದ ಕಂಡುಬಂದಿದೆ. ಕನಕಪುರ–ರಾಮನಗರ ತಾಲ್ಲೂಕು ಗಡಿಭಾಗದಲ್ಲಿರುವ ಚನ್ನಮ್ಮನಪಾಳ್ಯ ಸೇರಿದಂತೆ ಸುತ್ತಮುತ್ತಲ ಗಡಿ ಗ್ರಾಮಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸದರಿ ಸ್ಥಳದಲ್ಲಿ ಶಾಲಾ ಕಟ್ಟಡ ನಿರ್ಮಿಸಲಾಗಿದ್ದು ಕಳೆದ 25 ವರ್ಷಗಳಿಂದ ಸಾವಿರಾರು ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಾಕ್ಷಿಯಾಗಿದೆ.

**ವಿವಾದ ಸೃಷ್ಟಿಯಾಗಿದ್ದು ಏಕೆ:**

ಚನ್ನಮ್ಮನಪಾಳ್ಯ ಗ್ರಾಮದಲ್ಲಿರುವ ಸರಕಾರಿ ಶಾಲೆಯ ಸನಿಹದಲ್ಲಿ ವೆಂಕಟೇಶ್ವರ ಹಿಲ್ ಕ್ರಷರ್ ಹೆಸರಿನ ಜಲ್ಲಿಕಲ್ಲು ಪುಡಿಮಾಡುವ ಕ್ರಷರ್ ಘಟಕ ಸುರಕ್ಷಿತ ವಲಯದಲ್ಲಿಲ್ಲ. ನಿಯಮ ಮೀರಿ ಕಾರ್ಯನಿರ್ವಹಿಸುತ್ತಿದ್ದು ಶಬ್ದ ಮತ್ತು ವಾಯು ಮಾಲಿನ್ಯ ಉಂಟಾಗುತ್ತಿದೆ ಎಂದು ಸದರಿ ಕ್ರಷರ್ ವಿರುದ್ಧ ಗ್ರಾಮದ ಮಂಜುನಾಥ್ ಎಂಬ ಸಾಮಾಜಿಕ ಕಾರ್ಯಕರ್ತ 2023ರಲ್ಲಿ ಕರ್ನಾಟಕ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು.

ಈ ಪ್ರಕರಣದ ತನಿಖೆ ನಡೆಸಿ ವರದಿ ನೀಡುವಂತೆ ಲೋಕಾಯುಕ್ತರು ಆದೇಶ ಹೊರಡಿಸಿದ್ದರು.

ಹೀಗಾಗಿ ಉಪವಿಭಾಗಾಧಿಕಾರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳ ನೇತೃತ್ವದಲ್ಲಿ ಜಂಟಿ ಸರ್ವೆ ಕೈಗೊಳ್ಳಲಾಗಿತ್ತು. ಕ್ರಷರ್‌ನಿಂದ ಸರಕಾರಿ ಶಾಲೆ ಕೇವಲ 430 ಮೀಟರ್ ಅಂತರದಲ್ಲಿರುವುದು ಬೆಳಕಿಗೆ ಬಂದಿದೆ.

ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2020ರ ನಿಯಮ 6(1)ರನ್ವಯ ಯಾವುದೇ ಶಾಲೆಗಳು 500 ಮೀಟರ್ ಅಂತರದಲ್ಲಿ ಇರತಕ್ಕದ್ದಲ್ಲ. ಹಾಗಾಗಿ ಸದರಿ ಕ್ರಷರ್ ನಿಯಮಬಾಹೀರವೆಂದು ಪರಿಗಣಿಸಿ ಜಿಲ್ಲಾಧಿಕಾರಿಗಳು ಕ್ರಷರ್ ಪರವಾನಿಗೆಯನ್ನು ರದ್ದುಗೊಳಿಸಿರುತ್ತಾರೆ.

ಜಲ್ಲಿ ಕ್ರಷರ್ ಘಟಕ ಸ್ಥಗಿತಕ್ಕೆ ಕಾರಣವಾದ ಸರಕಾರಿ ಶಾಲೆಯನ್ನು ಬೇರೆಡೆಗೆ ಸ್ಥಳಾಂತರಗೊಳಿಸುವ ನಾನಾ ಪ್ರಯತ್ನಗಳು ಭರದಿಂದ ಸಾಗಿವೆ. ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕೆ ಪರ್ಯಾಯ ಜಾಗ ಕಲ್ಪಿಸುವ ಬೇಡಿಕೆ ಜತೆಗೆ ನಾನಾ ಅಮಿಷಗಳನ್ನು ಅಧಿಕಾರಿಗಳ ಮುಂದಿಡಲಾಗಿದೆ.

ಅಲ್ಲದೆ ಬೆಂಗಳೂರು ದಕ್ಷಿಣ ತಾಲೂಕಿನ ನಾಗನಾಯ್ಕನಹಳ್ಳಿಯಿಂದ ಕೆಲವು ಅಮಾಯಕರನ್ನು ಕರೆತಂದು ಶಾಲಾ ಸಹರದ್ದಿನಲ್ಲಿ ಅತಿಕ್ರಮಿಸಿ ಕಟ್ಟಡ ನಿರ್ಮಿಸಲು ಮುಂದಾಗಿದ್ದು ಈ ಬಗ್ಗೆ ಪ್ರಶ್ನಿಸಿದ ಗ್ರಾಮಸ್ಥರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಬೆದರಿಕೆ ಹಾಕಲಾಗಿದೆ ಎಂಬ ಆರೋಪಗಳು ಗ್ರಾಮಸ್ಥರಿಂದ ಕೇಳಿಬಂದಿದೆ.

# ಮೈಸೂರು ಮಲ್ಲಿಗೆ

ಕಾಣಲೊಂದು ಘಮಲ ಸಂಬಂಧ ಗಾಳಿಗೆ
ಸುಳಿದಾಡಿಸುತಲಿತ್ತು ಸಂಭ್ರಮದ ಜೊತೆಗೆ!
ಮುದಗೊಂಡ ಒಲವಿನ ದಾಂಪತ್ಯದ ಸಾಕ್ಷಿಗೆ
ಬೆಳದಿಂಗಳಲಿ ಚೆಲ್ಲುತಿದ್ದ ಚಂದ್ರನು ಹೂನಗೆ!
ದೇವಲೋಕವೇ ಇಳಿದು ಬಂದಿತ್ತು ಬುವಿಗೆ
ನರ್ತಿಸಲು ಪಂಥಾಹ್ವಾನವೇ ಇತ್ತು ಅಪ್ಸರೆಗೆ,
ನಲ್ಲೆಯ ನಸು ನಾಚಿದ ಆ ಮುಂಗುರುಳಿಗೆ
ಭದ್ರ ಆಧಾರ ನೀಡಿತ್ತು ಮೈಸೂರು ಮಲ್ಲಿಗೆ!
–ಮಂಜುಳಾ ಪ್ರಸಾದ್



# ಬೆಳಕೇ ಬೇಕಾಗಿ

ಸಿಂಗರಿಸಿ ನಿಂತಿರುವೆ ದೀಪದಾ ಬೆಳಕಿನಲಿ
ತಿಂಗಳಿನ ಬೆಳಕಿಂದು ಎದೆಯಗೂಡಲವಿತು
ಸಂಗಡಕೆ ಅವನಿಲ್ಲ ಮನದಿ ಬೇಸರ ಮೂಡಿ
ತಂಗಾಳಿ ಬೀಸುತಿದೆ ಬಯಕೆಗಳ ತಾ ಕೆದಕುತ್ತ

ಗೂಡುದೀಪದ ಸೊಬಗರಿಯದೆ ಹೃದಯಕ್ಕೆ
ಕಾಡಿ ತಾಗಿದ ಪವನ ತಣಿದಿಲ್ಲ ತನು ನೆಂದು
ಬಾಡಿಹೋಗುವ ಹೂವು ತುರುಬಲ್ಲಿ ಮಲಗಿತ್ತ
ನೋಡಿಬಾಗಿದೆ ಹೊರಗೆ ಬರುವನೋ ಎಂಬಂತೆ.

ಸರಸರನೆಯಲ್ಲಾಡಿ ತರಗೆಲೆಯು ನುಸುಳುತ್ತ
ಕರಕರನೆ ಸದ್ದಿನಲಿ ಸಪ್ಪಳವೆ ಕಾಲಿನದು
ಮಿರಮಿರನೆ ಬೆಳಗಿತ್ತು ಗೂಡದೀಪದ ಕಾಂತಿ
ಥರಥರನೆ ನಡುಗಿತ್ತು ಸೋಕಿ ಪ್ರೀತಿಯ ಕೈಯ್ಯಿ

ಕೆ.ಎನ್.ರೀನಾ,
ಮೈಸೂರು



ಇ–ಪೇಪರ್: www.munjaneevartheepaper.com

ಸ್ಥಳೀಯ

# ಸೈಬರ್‌ಕ್ರೈಮ್ ಸವಾಲು ಎದುರಿಸಲು 'ಕಾಪ್ ಕನೆಕ್ಟ್ ಕೆಫೆ' ಉದ್ಘಾಟನೆ

ಬೆಂಗಳೂಯುಉೂ: ಭಾರತದ ಹೆಚ್ಚುತ್ತಿರುವ ಸೈಬರ್‌ಕ್ರೈಮ್ ಸವಾಲುಗಳನ್ನು ಎದುರಿಸುವ ಸಹಯೋಗದ ಪ್ರಯತ್ನದಲ್ಲಿ, ಪ್ರಮುಖ ಸೈಬರ್‌ಸೆಕ್ಯುರಿಟಿ ಕಂಪನಿಯಾದ ಝುಡ್‌ಸ್ಕೇಲರ್ ಮತ್ತು ಐಎಸ್‌ಎಸಿ ಫೌಂಡೇಶನ್, ಸೈಬರ್‌ಸೆಕ್ಯುರಿಟಿಯಲ್ಲಿ ಭಾರತದ ಪ್ರಮುಖ ಲಾಭೋದ್ದೇಶವಿಲ್ಲದ ಸಂಸ್ಥೆ, ದಯಾನಂದ ಸಾಗರ್ ಅಕಾಡೆಮಿ ಆಫ್ ಟೆಕ್ನಾಲಜಿಯಲ್ಲಿ "ಕಾಪ್ ಕನೆಕ್ಟ್ ಕೆಫೆ" ಅನ್ನು ಉದ್ಘಾಟಿಸಿವೆ. ಬೆಂಗಳೂರಿನಲ್ಲಿ ನಿರ್ವಹಣೆ (ಡಿಎಸ್‌ಎಟಿಎಮ್). ಝುಡ್‌ಸ್ಕೇಲರ್ ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಕಾರ್ಯಕ್ರಮದಿಂದ ನಡೆಸಲ್ಪಡುವ ಈ ಉಪಕ್ರಮವು, ಜಗತ್ತಿನಾದ್ಯಂತ ಸಮುದಾಯಗಳಲ್ಲಿ ಸೈಬರ್ ನೈರ್ಮಲ್ಯ ಮತ್ತು ಸುರಕ್ಷತೆಯನ್ನು ಹೆಚ್ಚಿಸುವ



ಕಂಪನಿಗಳ ಬದ್ಧತೆಯನ್ನು ಒತ್ತಿಹೇಳುತ್ತದೆ. ಉದ್ಘಾಟನಾ ಸಮಾರಂಭವು ಸೈಬರ್ ವಂಚನೆಗಳ ಸಂದರ್ಭದಲ್ಲಿ ತಜ್ಞರ ಮಾರ್ಗದರ್ಶನ ಮತ್ತು ಸಹಾಯವನ್ನು ಪಡೆಯಲು ಸಮುದಾಯಕ್ಕೆ ಸುರಕ್ಷಿತ ಸ್ಥಳವನ್ನು ಒದಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಸೈಬರ್ ಮನಶ್ಶಾಸ್ತ್ರಜ್ಞರು, ತಾಂತ್ರಿಕ ತಜ್ಞರು ಮತ್ತು ಕಾನೂನು ಸಲಹೆಗಾರರನ್ನು ಒಳಗೊಂಡ ಬಹು–ಶಿಸ್ತಿನ ವಿಧಾನದ ಮೂಲಕ, ಸೈಬರ್ ಅಪರಾಧಗಳಿಂದ ಪ್ರಭಾವಿತರಾದ ವ್ಯಕ್ತಿಗಳು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಸಮಗ್ರ ಬೆಂಬಲವನ್ನು ಪಡೆಯುತ್ತಾರೆ.

ಐಎಸ್‌ಎಸಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾದ ಕೆಫೆ, ಆನ್‌ಲೈನ್ ಬೆದರಿಕೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಅಗತ್ಯ ಜ್ಞಾನ, ತರಬೇತಿ ಮತ್ತು ಸಹಾಯದೊಂದಿಗೆ ವ್ಯಕ್ತಿಗಳಿಗೆ ಅಧಿಕಾರ ನೀಡುವ ಮೂಲಕ ಪ್ರದೇಶದಲ್ಲಿ ಸೈಬರ್ ಭದ್ರತಾ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

ಉದ್ಘಾಟನೆಯ ಸಮಯದಲ್ಲಿ ಹೈಲೈಟ್ ಮಾಡಲಾದ ಪ್ರಮುಖ ಅಂಶಗಳು ಪ್ರೊಫೆಸರ್ಗಳು ಮತ್ತು ವಿದ್ಯಾರ್ಥಿಗಳನ್ನು ಪ್ರಮಾಣೀಕರಿಸಿದ ಸೈಬರ್ಸೆಕ್ಯುರಿಟಿ ಫಸ್ಟ್ ರೆಸ್ಪಾಂಡರ್ಗಳಾಗಲು ತರಬೇತಿ ನೀಡುವಲ್ಲಿ ಕೆಫೆಯ ಪಾತ್ರವನ್ನು ಒಳಗೊಂಡಿವೆ, ಇದರಿಂದಾಗಿ ಅವರು ತಮ್ಮ ಸಮುದಾಯಗಳನ್ನು ಅಗತ್ಯವಿರುವ ಸಮಯದಲ್ಲಿ ಬೆಂಬಲಿಸಲು ಅನುವು ಮಾಡಿಕೊಡುತ್ತದೆ.

ಹೆಚ್ಚುವರಿಯಾಗಿ, ಕೆಫೆ ಸಾಮಾನ್ಯ ಸೈಬರ್ ಸುರಕ್ಷತೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತದೆ ಮತ್ತು ಕಾಲೇಜುಗಳಲ್ಲಿ ಸೈಬರ್ ನೈರ್ಮಲ್ಯವನ್ನು ಹೆಚ್ಚಿಸಲು ಮಹಿಳಾ ಸುರಕ್ಷತಾ ಕ್ಲಬ್ಗಳನ್ನು ಸ್ಥಾಪಿಸುತ್ತದೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
18 SATURDAY MAY 2024
18 ಶನಿವಾರ ಮೇ 2024

# ಶ್ರೀ ದಕ್ಷಿಣೇಶ್ವರ ಸ್ವಾಮಿ ನೂತನ ದೇವಸ್ಥಾನದ ಪ್ರತಿಷ್ಠಾಪನ ಮಹೋತ್ಸವ

ಕೊರಟಗೆರೆ :– ಕೊರಟಗೆರೆ ತಾಲೂಕಿನ ಕೋಳಾಲ ಹೋಬಳಿ ಪುಟ್ಟಸಂದ್ರ ಗ್ರಾಮದಲ್ಲಿ ಮೇ 19 ಭಾನುವಾರ ಹಾಗೂ 20 ಸೋಮವಾರ ದಂದು ಶ್ರೀ ದಕ್ಷಿಣೇಶ್ವರ ಸ್ವಾಮಿ ನೂತನ ದೇವಸ್ಥಾನದ ಪ್ರತಿಷ್ಠಾಪನ ಮಹೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು ಪುಟ್ಟಸಂದ್ರ ಗ್ರಾಮಸ್ಥರು ಹಾಗೂ ಅಕ್ಕ ಪಕ್ಕದ ಗ್ರಾಮಸ್ಥರು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕೊರಟಗೆರೆ ನ್ಯಾಯ ಬೆಲೆ ಅಂಗಡಿ ಮಾಲೀಕರ ಸಂಘ ಕೊರಟಗೆರೆ ಹಾಗೂ ವೈ ಬಿ ಮಲ್ಲಿಕಾರ್ಜುನ್. ಖಜಾಂಚಿ .ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘವು ಕೊರಟಗೆರೆ ಪತ್ರಿಕಾ ಪ್ರಕಟಣೆ ಮೂಲಕ ಭಕ್ತಾದಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ.



ಶ್ರೀ ದಕ್ಷಿಣೇಶ್ವರ ಸ್ವಾಮಿ ದೇವಸ್ಥಾನದ ಪ್ರತಿಷ್ಠಾಪನಾ ಸಂದರ್ಭದಲ್ಲಿ ಮೇ 19ರ ಭಾನುವಾರ ದೇವಾಲಯದಲ್ಲಿ ಸಂಜೆ 6.30ಕ್ಕೆ ಗಣಪತಿ ಪೂಜೆ, ಗಂಗೆ ಪೂಜೆ, ನಂದಿ ಪೂಜೆ, ನವಗ್ರಹ ಪೂಜೆ ,ವಾಸ್ತು ಪೂಜೆ, ರುದ್ರಹೋಮವನ್ನು ಹಮ್ಮಿಕೊಳ್ಳಲಾಗಿದೆ, ಮೇ20ರ ಸೋಮವಾರ ಬೆಳಿಗ್ಗೆ 5:00ಯಿಂದ 6 ಗಂಟೆಗೆ ಸಲ್ಲುವ ಶುಭ ಬ್ರಾಹ್ಮಿ ಲಗ್ನದಲ್ಲಿ ದೇವತಾ ಪ್ರತಿಷ್ಠಾಪನೆ ,ರುದ್ರಾಭಿಷೇಕ, ಕಳಸ ಪ್ರತಿಷ್ಠಾಪನೆ, ಪೂರ್ಣಾಹುತಿ ,ಮಹಾ ಮಂಗಳಾರತಿ ಸೇರಿದಂತೆ ಇತರ ಪೂಜಾ ಕೈಂಕಾರಿಯಗಳನ್ನ ಹಮ್ಮಿಕೊಳ್ಳಲಾಗಿದ್ದು ಮಧ್ಯಾಹ್ನ 1:30 ಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮ ಸೇರಿದಂತೆ ಎಲ್ಲಾ ಪೂಜಾ ಕಾರ್ಯಕ್ರಮಗಳನ್ನ ಬಹಳ ಅದ್ದೂರಿಯಿಂದ ಆಯೋಜಿಸಲು ಸಕಲ ಸಿದ್ಧತೆ ನಡೆಸಲಾಗಿದೆ.

ಶ್ರೀ ದಕ್ಷಿಣೇಶ್ವರ ಸ್ವಾಮಿ ದೇವಸ್ಥಾನ ಪ್ರತಿಷ್ಠಾಪನ ಮಹೋತ್ಸವ ವಿಶೇಷವಾಗಿ ಮೇ 20 ಬೆಳಿಗ್ಗೆ 10:00ಗೆ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನ ಕೊರಟಗೆರೆ ತಾಲೂಕಿನ ಸಿದ್ದರಬೆಟ್ಟದ ಬಾಳೆಹೊನ್ನೂರು ರಂಭಾಪುರಿ ಶಾಖಾಮಠದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿಗಳು ಹಾಗೂ ಎಲೆರಾಂಪುರ ಕುಂಚಿಟಿಗ ಮಹಾ ಸಂಸ್ಥಾನ ಮಠದ ಶ್ರೀ ಹನುಮಂತನಾಥ ಸ್ವಾಮೀಜಿಗಳ ದಿವ್ಯ ಸಾನಿಧ್ಯ ವಹಿಸಲಿದ್ದು , ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಜಿ ಪರಮೇಶ್ವರ್ ಅಧ್ಯಕ್ಷತೆ ವಹಿಸಲಿದ್ದು ಬಹಳ ಅದ್ದೂರಿಯಿಂದ ಕಾರ್ಯಕ್ರಮ ನಿಯೋಜನೆಗೊಳ್ಳಲಿದೆ ಎಂದು ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಖಜಾಂಚಿ

ವೈ ಬಿ ಮಲ್ಲಿಕಾರ್ಜುನ್ ಭಕ್ತಾದಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ.



## ನಿಧನವಾರ್ತೆ

ಸೌಭಾಗ್ಯ ಜಗದೀಶ್ ಒಡೆಯರ್

ಲಿಂಗಾಯತ ಸಮಾಜದ ಪ್ರಮುಖರಾಗಿರುವ ಜಗದೀಶ್ ಒಡೆಯರ್ ಕಾಗೋಡುರವರ ಪತ್ನಿ ಸೌಭಾಗ್ಯ (67) ಅವರು ಗುರುವಾರ ಬೆಂಗಳೂರಿನಲ್ಲಿ ಅನಾರೋಗ್ಯದಿಂದ ನಿಧನರಾಗಿದ್ದಾರೆ.



ಜಿಲ್ಲೆಯ ಮೊದಲ ಸಂಸದರಾಗಿದ್ದ ದಿ. ಕೆ.ಜಿ. ಒಡೆಯರ್‌ರ ಸೊಸೆಯಾಗಿರುವ ಇವರಿಗೆ ಪತಿ, ಇಬ್ಬರು ಗಂಡು ಮಕ್ಕಳಿದ್ದಾರೆ. ಸೌಭಾಗ್ಯರವರು ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹತ್ತಾರು ಕರ‍್ಯಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಮೃತರ ಪಾರ್ಥಿವ ಶರೀರವನ್ನು ಗುರುವಾರ ರಾತ್ರಿ ಸಾಗರಕ್ಕೆ ತರಲಾಗಿತ್ತು. ಶುಕ್ರವಾರ ಬೆಳಗ್ಗೆ ಪೇಟೆಯ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಶುಕ್ರವಾರ ಮಧ್ಯಾಹ್ನ ಒಡೆಯರ್‌ರ ಸ್ವಗ್ರಾಮ ಕಾಗೋಡಿನಲ್ಲಿ ಅಂತ್ಯಕ್ರಿಯೆ ನಡೆಯಿತು. ಶಾಸಕ ಗೋಪಾಲಕೃಷ್ಣ ಬೇಳೂರು, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಮಾಜಿ ಸಚಿವ ಹರತಾಳು ಹಾಲಪ್ಪ. ತಾಲೂಕು ವೀರಶೈವ ಸಮಾಜದ ಪ್ರಮುಖರು, ಪ್ರಾಂತ್ಯ ಅಡಕೆ ಬೆಳೆಗಾರರ ಸಂಘ, ಸೇರಿದಂತೆ ಹತ್ತಾರು ಸಂಘಟನೆಗಳ ಪ್ರಮುಖರು ಸಂತಾಪ ವ್ಯಕ್ತಪಡಿಸಿದರು.

ವರದಿ.ರಾಘವೇಂದ್ರ ತಾಳಗುಪ್ಪ

## ಈಜಲು ಹೋಗಿ ನಾಲ್ವರು ಬಾಲಕರು ನೀರು ಪಾಲು

ಕೆರೆಯಲ್ಲಿ ಈಜಲು ಹೋಗಿ ನಾಲ್ವರು ಬಾಲಕರು ಮುಳುಗಿ ಸಾವನಪ್ಪಿರುವ ಘಟನೆ ಆಲೂರು ತಾಲೂಕು ಕದಾಳು ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಮುತ್ತಿಗೆಯಲ್ಲಿ ನಡೆದಿದೆ.

ಮುತ್ತಿಗೆ ಜೀವನ್ (13 )ಸಾತ್ವಿಕ್ (11) ವಿಶ್ವ ಹಾಗೂ ಪೃಥ್ವಿ( 12 )ವರ್ಷದ ಮೃತ ಬಾಲಕರಾಗಿರುತ್ತಾರೆ.

ಶಾಲೆಗೆ ರಜೆ ಇರುವುದರಿಂದ ಈಜಲು ಹೋಗಿದ್ದ ಮಕ್ಕಳು ಒಬ್ಬರನ್ನೊಬ್ಬರು ರಚಿಸುವ ಪ್ರಯತ್ನದಲ್ಲಿ ಮುಳುಗಿರುತ್ತಾರೆಂದು ಗ್ರಾಮಸ್ಥರು ಮಾಹಿತಿ ನೀಡಿದಾರೆ .

ಕೂಡಲೇ ಅಗ್ನಿಶಾಮಕ ದಳದವರು ಘಟನೆ ನಡೆದ ಸ್ಥಳಕ್ಕೆ ಆಗಮಿಸಿ ಶವಗಳ ಕಾರ್ಯಚರಣೆ ನಡೆಸಿ ನಾಲ್ಕು ಮಕ್ಕಳ ದೇಹವನ್ನು ಹೊರಕ್ಕೆ ತೆಗೆದಿದ್ದಾರೆ.

ನಂತರ ಆಲೂರು ಪೊಲೀಸ್ ಸಿಬ್ಬಂದಿಗಳು ಆಗಮಿಸಿ ಪರಿಶೀಲಿಸಿ ಬಾಲಕರ ಮೃತ ದೇಹವನ್ನು ಆಲೂರು ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಯಿತು.

ಇದೇ ಸಂದರ್ಭದಲ್ಲಿ ಶಾಸಕ ಮಂಜುನಾಥ್, ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿಗಳು, ಸಕಲೇಶಪುರ ಉಪ ವಿಭಾಗದ ಅಧಿಕಾರಿ, ತಹಸಿಲ್ದಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಆಗಮಿಸಿ ಮೃತ ಮಕ್ಕಳ ಪೋಷಕರಿಗೆ ಸಾಂತ್ವನ ನೀಡಿ ಬಾಲಕರ ಶವಕ್ಕೆ ಕಂಬನಿ ಮಿಡಿದಿದ್ದಾರೆ.

ಹೆತ್ತವರ ಮನ ಕಲಕುವಂತಿದೆ ಇಂದಿನ ಘಟನೆ. ಇನ್ನೂ ಎಳೆ ವಯಸ್ಸಿನ ಮಕ್ಕಳು,ಆಟ ಆಡಿಕೊಂಡು ತಂದೆ ತಾಯಿಗಳ ಜೊತೆ ಸ್ವಚ್ಛಂಧವಾಗಿ ಬದುಕಿ ಬಾಳಬೇಕಾದ ಕಂದಮ್ಮಗಳು ಇಂದು ಕೇವಲ ನೆನಪಾಗಿದ್ದಾರೆ. ಎಂತ ದುರ್ದೈವ ಪಾಪಿ ಕಣ್ಣಿಲ್ಲಿ ಉಸಿರುಗಟ್ಟಿ ಮುಳುಗಿದ ಮುಗ್ದ ಮನಸಿನ ಕಂದಮ್ಮಗಳ ಮೃತ ದೇಹ ಕಾರ್ಯಚಾರಣೆ ಮಾಡುವಾಗ ಒಂದೊಂದೇ ಮಕ್ಕಳ ದೇಹ ಸಿಕ್ಕಾಗೆಲ್ಲ ಕಿರುಚಿ ರೋದಿಸುವ ಪಾಲಕರ ಕಣ್ಣೀರ ನೋಡುವುದ್ಹೇಗೆ? ಒಂದೇ ಕ್ಷಣ ಮಕ್ಕಳ ಹೆರಲೇ ಬಾರದು ಈ ಜನ್ಮ ಹೆತ್ತರೂ ಈ ಸ್ಥಿತಿಯಲ್ಲಿ ನೋಡಬಾರದು ಎಂದು ಬೋರ್ಗರೆದು ಅಳುವ ಸಂಭಂದಿಕರ ಕಣ್ಣೀರು ಎಂಥ ಕಲ್ಲು ಹೃದಯವನ್ನು ಕರಗಿಸಿಬಿಟ್ಟಿತ್ತು.

ದಯಮಾಡಿ ಮಕ್ಕಳೇ ಶಾಲೆ ರಜೆ ದಿನವನ್ನು ನಿಮ್ಮ ಪೋಷಕರೊಂದಿಗೆ ಆಟ ಆಡುತ್ತಾ ಕಳೆಯಿರಿ, ಎಲ್ಲಿಗಾದರೂ ಹೋಗುವ ಸಂಧರ್ಭ ತಂದೆ ತಾಯಿಗಳಿಗೆ ತಿಳಿಸಿ ಹೋಗಿ, ಅವರಿಗೆ ಗೊತ್ತಿಲ್ಲದಂತೆ ಈಜುವುದು ಬೈಕ್ ಓಡಿಸುವುದು ಇಂತಹ ಚಟುವಟಿಕೆಯಲ್ಲಿ ಪಾಲ್ಗೊಳ್ಳಬೇಡಿ ಈ ವಾಹಿನಿಯ ಆಶಯವಾಗಿದೆ.



# ನೈರುತ್ಯ ಪದವೀಧರ ಕ್ಷೇತ್ರದ

## ಧನಂಜಯ ಟಿಕೇಟ್ ಕೊಟ್ಟಿರುವುದನ್ನು ವಿರೋದಿಸಿ

ಬಿ.ಜೆ.ಪಿಯ ಯಲ್ಲಿ ಬಂಡಾಯವಾಗಿ ರಘುಪತಿ ಭಟ್ಟರು ನೈರುತ್ಯ ಪದವೀಧರ ಕ್ಷೇತ್ರಕ್ಕೆ ಸ್ಪರ್ಧೆ ಬಯಸಿ ನಿನ್ನ ನಾಮಪತ್ರ ಸಲ್ಲಿಸಿದ್ದಾರೆ. ಅದರಂತೆ ಬಿಜೆಪಿ ಪಕ್ಷದಲ್ಲಿಯೇ ಮತ್ತೋರ್ವ ಆಕಾಂಕ್ಷಿ ವಿರೋಧಿಸಿದ್ದಾರೆ .ನೈರುತ್ಯ ಪದವೀಧರ ಕ್ಷೇತ್ರದ ಧನಂಜಯ ಸರ್ಜಿಗೆ ಟಿಕೇಟ್ ಕೊಟ್ಟಿರುವುದನ್ನ ಬಿಜೆಪಿಯಲ್ಲಿ ಮತ್ತೊಂದು ಆಕ್ಷೇಪಣೆ ಹೊರಬಿದ್ದಿದೆ. ಬಿಜೆಪಿಯ ಬಂಡಾಯವಾಗಿ ರಘುಪತಿ ಭಟ್ಟರು ನೈರುತ್ಯ ಪದವಿಧರ ಕ್ಷೇತ್ರಕ್ಕೆ ಸ್ಪರ್ಧೆ ಬಯಸಿ ನಿನ್ನೆ ನಾಮಪತ್ರ ಸಲ್ಲಿಸಿದ್ದಾರೆ. ಅದರಂತೆ ಬಿಜೆಪಿ ಪಕ್ಷದಲ್ಲಿಯೇ ಮತ್ತೋರ್ವ ಆಕಾಂಕ್ಷಿ ವಿರೋಧಿಸಿದ್ದಾರೆ.

ಆದರೆ ಡಾ.ಧನಂಜಯ್ ಸರ್ಜಿ ಅವರ ವಿರುದ್ಧ ಅವರ ಕ್ಷೇತ್ರದ ಮತ್ತೋರ್ವ ಆಕಾಂಕ್ಷಿ ಹಾಗೂ ಬಿಜೆಪಿಯ ಕಾನೂನು ಪ್ರಕೋಷ್ಠದ ಜಿಲ್ಲಾ ಸಹ ಸಂಚಾಲಕ ಪ್ರವೀಣ್ ಇಂದು




ಸುದ್ದಿಗೋಷ್ಠಿ ನಡೆಸಿ ಇತ್ತೀಚೆಗೆ ಪಕ್ಷಕ್ಕೆ ಬಂದವರಿಗೆ ಮಣೆಹಾಕಲಾಗಿದ್ದು ಇದನ್ನುವಿರೋದಿಸಿ ನನ್ನತರಹ ಮೂಲ ಬಿ.ಜೆ.ಪಿ.ಕಾರ್ಯಕರ್ತರು ಆಕ್ಷೇಪಿಸಿದ್ದಾರೆ.

ಟಿಕೇಟ್ ಹಂಚಿಕೆಯಾದಮೇಲೆ ಡಾ.ಸರ್ಜಿ ಅವರು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ.ವಕೀಲರು ಎಂದರೆ ಬಿಜೆಪಿಗೆ ಬೇಡವಾಗಿದೆ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ದತ್ತಾತ್ರಿ, ಧರ್ಮಪ್ರಸಾದ್, ಗಿರೀಶ್ ಪಟೇಲ್ ಹಾಗೂ ನಾನು ಶಿವಮೊಗ್ಗದಿಂದ ನೈರುತ್ಯ ಪದವೀಧರ ಕ್ಷೇತ್ರಕ್ಕೆ ಆಕಾಂಕ್ಷಿಯಾಗಿದ್ದೆವು. ಯಾವ ಕಾರ್ಯಕರ್ತರನ್ನೂ ಪರಿಗಣಿಸದೆ ಡಾ.ಸರ್ಜಿಗೆ ಟಿಕೇಟ್ ನೀಡಲಾಗಿದೆ. ನಾವೆಲ್ಲಾ 15 ವರ್ಷಗಳಿಂದ ಪಕ್ಷಕ್ಕೆ ಕೆಲಸ ಮಾಡಿದ್ದೇವೆ ಎಂದರು.

ಆಕಾಂಕ್ಷಿಗಳನ್ನ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನವೂ ಮಾಡದೆ ನಾಮಪತ್ರ ಸಲ್ಲಿಸಲಾಗಿದೆ. ಲಿಂಗಾಯಿತರೇ ಬೇಕಿದೆ ಎಂದಿದ್ದರೆ ನಾವು ಇದ್ದೇವೆ. 20 ವರ್ಷ ಕೆಲಸ ಮಾಡಿದ ಕಾರ್ಯಕರ್ತರನ್ನ ಈ ಪರಿಷತ್ ಚುನಾವಣೆಗೆ ಕಣಕ್ಕಿಳಿಸಬೇಕಿತ್ತು. ಆದರೆ ಆ ರೀತಿ ನಡೆಯಲಿಲ್ಲ ಎಂದು ಕಿಡಿಕಾರಿದರು.

ಸಂಘಟನೆ ಚೌಕಟ್ಟಿನಲ್ಲಿ ಇದ್ದ ನಾವು ಆದರು ಜಿಲ್ಲಾ ನಾಯಕರಿಗೆ ಹತ್ತಿರವಿದ್ದವರಿಗೆ ಟಿಕೇಟ್ ನೀಡಲಾಗಿದೆ. ಸಂಘಟನೆ ವಿರುದ್ಧ ಹೋಗಲ್ಲ. ಆದರೆ ಮತ್ತೊಮ್ಮೆ ಹೀಗೆ ಆಗಬಾರದು ಎಂದು ಆಕ್ಷೇಪಿಸಲಾಗಿದೆ. ರಘುಪತಿ ಭಟ್ಟರಿಗೆ ಬೆಂಬಲಿಸಬೇಕೋ, ಅಥವಾ ಬೇಡವೋ ಎಂಬುದು ಮೇ.20 ರ ನಂತರ ನಿರ್ಧಾರ ಕೈಗೊಳ್ಳಲಾಗುವುದು. ಅಂತಿಮ ಕಣದಲ್ಲಿ ಯಾರು ಉಳಿತಾರೆ ನೋಡಿ ಮಾತನಾಡುವುದಾಗಿ ತಿಳಿಸಿದರು.

ಹೆಂಡ, ಹಣ ಹಂಚಿ ಗೆದ್ದಿದ್ದ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ಯನ್ನು ಎನ್ ಡಿಎ ಪರವಾಗಿ ಕಣಕ್ಕಿಳಿಸಲಾಗಿದೆ. ಈ ಅಭ್ಯರ್ಥಿಯ ವಿರುದ್ಧ ನಾವು ಇರುವುದಾಗಿ ಭೋಜೇಗೌಡರ ಸ್ಪರ್ಧೆಯನ್ನ ವಿರುಧಿಸಿದರು. ಕೆಲ ಕಾರ್ಯಕರ್ತರ ಧ್ವನಿಯಾಗಿ ಇಂದು ಸುದ್ದಿಗೋಷ್ಠಿ ನಡೆಸಿದ್ದೇವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲ ದೇವೇಂದ್ರಪ್ಪ, ಮಹೀಂದ್ರ ಕುಮಾರ್, ವಾಗೀಶ್ ಉಪಸ್ಥಿತರಿದ್ದರು.

ವರದಿ ..ರಾಘವೇಂದ್ರ ತಾಳಗುಪ್ಪ




ತಾಲ್ಲೂಕಿನಲ್ಲಿ ಯಾವುದೇ ರೀತಿಯಲ್ಲಿ ಮಳೆಗಾಲದಲ್ಲಿ ಹಾನಿ ಆಗದಂತೆ ಮುಂಜಾಗ್ರತಾ ಕ್ರಮ. ಸಾಗರ ಉಪವಿಭಾಗದಲ್ಲಿ ಯಾವುದೇ ರೀತಿಯ ತೊಂದರೆ ಆಗದಂತೆ ಮುನ್ನೆಚ್ಚರಿಕಾ ಕ್ರಮ ವಹಿಸಲಾಗಿದೆ.ಇದಕ್ಕಾಗಿಯೇ ಉಪವಿಭಾಗ ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಿ ಆ ಕಮಿಟಿಯು ಪ್ರತಿ ಹೋಬಳಿಯಲ್ಲಿ ಎನೆ ಆದರು ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಹಾರ ನೀಡುವ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.ಸಾಗರದ ಕೆಲವು ಕಡೆಯಲ್ಲಿ ಅಂದರೆ ತಾಳಗುಪ್ಪ ಗ್ರಾಮದಲ್ಲಿ ಕಸವಿಲೇವಾರಿ ಸ್ಥಗಿತಗೊಂಡಿದ್ದು ಅದಕ್ಕೆ ತಕ್ಷಣವೇ ತಾತ್ಕಾಲಿಕವಾಗಿ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದರು. ಇದಕ್ಕೆ ಸಂಬದಿಸಿದ ಯಾವುದೇ ದೂರು ಇದ್ದರು ಬೆಳಿಗ್ಗೆ 9 ರಿಂದ ಸಂಜೆ 6 ರ ತನಕ .ತಾಲ್ಲೂಕು ಪಂಚಾಯತ್ ನ ಸಹಾಯವಾಣಿ ಸಂಖ್ಯೆ 08183––226074 ಸಂಪರ್ಕಿಸಿ ದೂರನ್ನು ದಾಖಲಿಸಬಹುದು... ವರದಿ.ರಾಘವೇಂದ್ರ ತಾಳಗುಪ್ಪ

## ರೈತರ ಸಾಲ ಮನ್ನಾಗೆ ಆಗ್ರಹ

ಬೆಂಗಳೂರು: ರೈತ ವಿರೋಧಿ, ಕಣ್ಣು, ಕಿವಿ, ಹೃದಯ ಇಲ್ಲದ ಕಾಂಗ್ರೆಸ್ ಸರ್ಕಾರ ನರೇಗಾ ಹಣ, ಪಿಂಚಣಿ ಹಣವನ್ನೂ ರೈತರ ಸಾಲಕ್ಕೆ ಜಮೆ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡಲೇ ರೈತರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳದಂತೆ ಬ್ಯಾಂಕ್ ಗಳಿಗೆ ಸೂಚಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಿ. ಬ್ಯಾಂಕ್ ಗಳು ಒಪ್ಪದಿದ್ದರೆ ರೈತರ ಸಾಲ ಮನ್ನಾ ಮಾಡಲಿ ಎಂದು ಪ್ರತಿಪಕ್ಷ ನಾಯಕ ಆರ್ ಅಶೋಕ್ ಅವರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಸಂಬಂಧ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಅಶೋಕ್, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕರ್ನಾಟಕದ ರೈತರಿಗಾಗಿ 3,454 ಕೋಟಿ ರೂ. ಬರ ಪರಿಹಾರವನ್ನು ಬಿಡುಗಡೆಗೊಳಿಸಿದೆ.

ಆದರೆ ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯನವರ ಸರ್ಕಾರ ತನ್ನ ಪಾಲಿನ ಹಣವನ್ನು ನೀಡಿಲ್ಲ. ಕೇಂದ್ರ ಸರ್ಕಾರ ನೀಡಿದ ಹಣವನ್ನು ಕೂಡ ರೈತರಿಗೆ ಸರಿಯಾಗಿ ತಲುಪಿಸಿಲ್ಲ. ಈ ಪರಿಹಾರದ ಹಣವನ್ನು ಹಳೆ ಬಾಕಿಗಳಿಗೆ ಬ್ಯಾಂಕುಗಳು ಜಮೆ ಮಾಡುತ್ತಿದ್ದರೂ ರಾಜ್ಯ ಸರ್ಕಾರ ತಕ್ಷಣದ ಕ್ರಮ ವಹಿಸದೆ ಕೈ ಕಟ್ಟಿ ಕುಳಿತಿತ್ತು. ಈಗ ಪಿಂಚಣಿ, ನರೇಗಾ ಹಣವೂ ರೈತರ ಕೈ ಸೇರುವಂತೆ ನೋಡಿಕೊಳ್ಳಲು ಸರ್ಕಾರ ವಿಫಲವಾಗಿದೆ. ಈ ಮೂಲಕ ಅನ್ನದಾತರ ಹೊಟ್ಟೆಗೆ ಹೊಡೆಯುವ ಪಾಪದ ಕೆಲಸ ಮಾಡುತ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಸಿದ್ದರಾಮಯ್ಯ ಅವರು ಈ ಕೂಡಲೇ ಬ್ಯಾಂಕ್ ಅಧಿಕಾರಿಗಳ ಸಭೆ ಕರೆದು ರೈತರ ಹಣವನ್ನು ಸಾಲಕ್ಕೆ ಜಮೆ ಮಾಡಿಕೊಳ್ಳದಂತೆ ಸೂಚನೆ ನೀಡಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಬೇಕು. ಬ್ಯಾಂಕ್ ಗಳು ಒಪ್ಪದಿದ್ದರೆ ರೈತರ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

# ಕೊಪ್ಪ ಪಿಎಸಿಎಸ್‌ಗೆ ಕೆ. ಲಿಂಗರಾಜು ನೂತನ ಅಧ್ಯಕ್ಷ

ಮದ್ದೂರು: ತಾಲೂಕಿನ ಕೊಪ್ಪ ಗ್ರಾಮದ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೊಪ್ಪದ ಕೆ. ಲಿಂಗರಾಜು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘದ ಹಿಂದಿನ ಅಧ್ಯಕ್ಷರಾದ ಚಿಕ್ಕೋನಹಳ್ಳಿ ರಾಮಕೃಷ್ಣ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಕೆ. ಲಿಂಗರಾಜು ಅವರನ್ನು ಹೊರತುಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಕಾರಣ ನೂತನ ಅಧ್ಯಕ್ಷರಾಗಿ ಕೆ. ಲಿಂಗರಾಜು ಅವರು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಿ. ಆಶಾ ಅವರು ಘೋಷಿಸಿದರು.

ನೂತನ ಅಧ್ಯಕ್ಷರಾದ ಕೆ. ಲಿಂಗರಾಜು ಅವರು ಸಹಕಾರ ಸಂಘದ ನಿರ್ದೇಶಕರು, ಗ್ರಾಮಸ್ಥರು ಹಾಗೂ ರೈತರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಕೊಪ್ಪ ಸಹಕಾರ ಸಂಘದ ನಿರ್ದೇಶಕರು ನನ್ನ ಮೇಲೆ ವಿಶ್ವಾಸವಿಟ್ಟು ನನ್ನನ್ನು ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅವರೆಲ್ಲರ ಸಹಕಾರ ಪಡೆದು ಸಹಕಾರ ಸಂಘದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸಲಿದ್ದೇನೆ. ಕೃಷಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್. ಚಲುವರಾಯಸ್ವಾಮಿ ಅವರ ಮಾರ್ಗದರ್ಶನದಲ್ಲಿ ನಾನು ಕಾರ್ಯಪ್ರವೃತ್ತನಾಗಲಿದ್ದು, ರೈತರಿಗೆ ಸಕಾಲಕ್ಕೆ ರಸಗೊಬ್ಬರ ಪೂರೈಕೆ, ಸಾಲ ವಿತರಣೆ, ಷೇರುದಾರರಿಗೆ



ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ಸಕಾಲಕ್ಕೆ ತಲುಪಿಸುವ ಹಾಗೂ ಕೊಪ್ಪ ಸಹಕಾರ ಸಂಘವನ್ನು ಹೈಟೆಕ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಇಂಗಿತ ಹೊಂದಿದ್ದು, ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರ ವಿಶ್ವಾಸ ಪಡೆದು ಕ್ರಿಯಾತ್ಮಕ ಮತ್ತು ಸಂಘಟನಾತ್ಮಕ ಕೆಲಸ ಮಾಡುವ ಮೂಲಕ ಸಹಕಾರ ಸಂಘವನ್ನು ಮಾದರಿಯನ್ನಾಗಿ ರೂಪಿಸಲಾಗುವುದು ಎಂದು ಭರವಸೆ ವ್ಯಕ್ತಪಡಿಸಿದರು.

ಕೆ. ಲಿಂಗರಾಜು ಅವರು ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ನಿರ್ದೇಶಕರು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ಹೂವಿನ ಹಾರಗಳನ್ನು ಹಾಕಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಸಿ. ಜೋಗಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್. ದಿವಾಕರ್, ಕೊಪ್ಪ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಉಪಾಧ್ಯಕ್ಷೆ ಲಕ್ಷ್ಮಮ್ಮ ಈರೇಗೌಡ, ಮಾಜಿ ಉಪಾಧ್ಯಕ್ಷ ಹಾಗೂ ನಿರ್ದೇಶಕ ರಮೇಶ್ ಕೊಪ್ಪ, ನಿರ್ದೇಶಕರಾದ ಎಚ್.ವಿ. ಶಿವಣ್ಣ, ಕೆ.ಜೆ. ಕೃಷ್ಣೇಗೌಡ, ರಾಮಕೃಷ್ಣ, ಟಿ. ಕಾಂತರಾಜು, ಕೆ.ಜಿ. ಜಯರಾಮು, ಶಿವಲಿಂಗೇಗೌಡ, ಜೆ.ಪಿ. ಮಂಜುಳ, ಚಂದ್ರಶೇಖರ್, ಟಿ. ಪುಟ್ಟಸ್ವಾಮಿ, ರವಿ, ಡಿಸಿಸಿ ಬ್ಯಾಂಕ್ ವೃತ್ತ ಮೇಲ್ವಿಚಾರಕ ರವೀಂದ್ರ ಕುಮಾರ್, ಸಿಇಓ ಎಂ. ಮಹಾದೇವ, ಸಿಬ್ಬಂದಿಗಳಾದ ಕೆ. ಅಶೋಕ, ಜೆ. ಶೃತಿ, ಟಿಎಪಿಸಿಎಂಎಸ್ ನಿರ್ದೇಶಕ ಹರಳಕೆರೆ ಕರಿಯಪ್ಪ, ತಾ.ಪಂ ಮಾಜಿ ಉಪಾಧ್ಯಕ್ಷ ಬಿ.ಎಂ. ರಘು, ಸದಸ್ಯ ತೋಯಜಾಕ್ಷ, ಗ್ರಾ.ಪಂ ಅಧ್ಯಕ್ಷ ರುದ್ರೇಶ್, ಸದಸ್ಯರಾದ ಕುಮಾರ್ ಕೊಪ್ಪ, ಕೆ.ಎಂ. ಪರ್ವೀಜ್ ಅಹಮದ್, ಗಿರೀಶ್, ನವೀನ, ಮುಖಂಡರಾದ ಸಿ.ಎಸ್.ರವಿ. ಕೆ.ಯೋಗನಂದ, ಬಿ.ಸಿ. ಸತೀಶ್, ಸಿ. ತಮ್ಮಯ್ಯ, ಎಂ.ಬಿ. ವೆಂಕಟೇಶ, ವಾಸು, ಕಾಂತರಾಜು ಸೇರಿದಂತೆ ಇತರರಿದ್ದರು.

ಮದ್ದೂರು ತಾಲೂಕಿನ ಕೊಪ್ಪದ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಕೊಪ್ಪದ ಕೆ ಲಿಂಗರಾಜು ಅವರನ್ನು ನಿರ್ದೇಶಕರು ಮತ್ತು ಗ್ರಾಮಸ್ಥರು ಅಭಿನಂದಿಸಿದರು ಕೆ.ಸಿ. ಜೋಗಿಗೌಡ ಕೆ.ಎನ್. ದಿವಾಕರ್, ರುದ್ರೇಶ್, ಹರಳಕೆರೆ ಕರಿಯಪ್ಪ ಇದ್ದಾರೆ.

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: 91414 14119 Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085